# ವ್ಯಕ್ತಿಚಿತ್ರ - ಪದ್ಮಶ್ರೀ ಪಂ.ಬಸವರಾಜ ರಾಜಗುರು

## ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ ಉಪನ್ಯಸ ಗ್ರಂಥಮಾಲೆ ಅತ್ಯಂತ ಮುಖ್ಯವು, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿ ಏಳು ಜಿಲ್ಲೆಗಳಲ್ಲಿ ಉಪನ್ಯಾಸ ಶಿಬಿರಗಳನ್ನು ಏಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು ಶಾಸ್ತ್ರಸಮ್ಮತವಾದ ಸರಣಿಯಲ್ಲಿ ಸರಣಿಯಲ್ಲಿ ಜನ ಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನ ಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ನಮ್ಮ ಪ್ರಯತ್ನಕ್ಕೆ ನಿರೀಕ್ಷೆಗೆ ಮೀರಿದ ಮೆಚ್ಚುಗೆಯೂ, ಪ್ರೋತ್ಸಾಹವೂ ದೊರೆಯುತ್ತಿದೆ. ಜನರು ತಾವಾಗಿಯೇ ಮುಂದು ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು 'ವಿಶ್ವವಿದ್ಯಾಲಯಕ್ಕೆ' ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರದ ಕಾರ್ಯದಲ್ಲಿ ಭಾಗವಹಿಸುವುದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವುದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿ ತಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೫೪೩ ಪುಸ್ತಿಕೆಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರ ಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಿಕೆಗಳು ನಾಲ್ಕು ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಜನಪ್ರಿಯತೆಯನ್ನು ವ್ಯಕ್ತಗೊಳಿಸುತ್ತದೆ. ನಾನು ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

**ಪ್ರೊ.ಎಸ್.ಕೆ. ಸೈದಾಪುರ** F.A.Sc.FNA
ಕುಲಪತಿಗಳು
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

# ಅರಿಕೆ

ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗ ವ್ಯಾಸಂಗ ವಿಸ್ತೀರ್ಣವು ಹಮ್ಮಿಕೊಂಡ ೪೭ನೆಯ ಉಪನ್ಯಾಸ ಶಿಬಿರವು ಕಾರವಾರ ಜಿಲ್ಲೆಯ ಕಡತೋಕಾದಲ್ಲಿ ದಿನಾಂಕ ೨೨-೦೧-೨೦೦೫ ರಂದು ಜರುಗಿತು. ಪ್ರಸ್ತುತ ಶಿಬಿರದಲ್ಲಿ ನೀಡಿದ ಉಪನ್ಯಾಸವೇ ಈ ಕಿರುಹೊತ್ತಿಗೆಯಾಗಿದೆ.

ಪದ್ಮಶ್ರೀ ಪಂ.ಬಸವರಾಜ ರಾಜಗುರು ಅವರು ಅಖಿಲ ಭಾರತವು ಕಂಡ ಅದಮ್ಯ ಸಂಗೀತ ಚೇತನವಾಗಿದ್ದರು. ಅವರು ಹಿಂದೂಸ್ತಾನಿ ಸಂಗೀತದ ದಿಗ್ಗಜರು. ಅವರು ಗ್ವಾಲಿಯರ ಮತ್ತು ಕಿರಾಣ್‌ಘರಾಣೆಗಳಲ್ಲಿ ಬಹು ದೊಡ್ಡ ಹೆಸರನ್ನು ಮಾಡಿದ್ದಾರೆ. ಅವರು ಪಾಕಿಸ್ತಾನ ಮತ್ತಿತರ ವಿದೇಶಗಳಲ್ಲಿ ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಅಂತಹ ಮಹನಿಯರು ಹಿಂದೂಸ್ತಾನಿ ಸಂಗೀತದ ಪರಂಪರೆಯ ಉಳುವಿಗಾಗಿ ಹಲವಾರು ಶಿಷ್ಯರನ್ನು ತಯಾರಿಸಿದ್ದಾರೆ. ಇಂದು ಅವರ ಶಿಷ್ಯರಲ್ಲಿ ಶ್ರೀ ಗಣಪತಿ ಭಟ್ಟ ಹಾಸಣಗಿ, ಪರಮೇಶ್ವರ ಹೆಗಡೆ, ಸೋಮನಾಥ ಮರಡೂರ ಮುಂತಾದವರು ತಮ್ಮ ಗುರುಗಳ ಸಂಗೀತ ಪರಂಪರೆಯನ್ನು ಮುಂದುವರೆಸಿದ್ದು ಸಂತೋಷದ ಸಂಗತಿಯಾಗಿದೆ. ಅಂತವರ ಬಗ್ಗೆ ನಾನು ಒಂದು ಉಪನ್ಯಾಸವನ್ನು ನೀಡಿದು ನನ್ನ ಸೌಭಾಗ್ಯವಾಗಿದೆ.

ನನಗೆ ಈ ಸಂಗೀತ ಉಪನ್ಯಾಸವನ್ನು ನೀಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದ ನಿರ್ದೇಶಕರಾದ ಡಾ. ಹರಿಲಾಲ ಪವಾರರಿಗೆ ನನ್ನ ಕೃತಜ್ಞತೆಗಳು. ಈ ಪುಟ್ಟ ಕೃತಿಯನ್ನು ನನ್ನ ಧರ್ಮಪತಿ ಹಾಗೂ ಸಾಹಿತಿ ಡಾ. ಮಲ್ಲಿಕಾರ್ಜುನ ಪಾಟೀಲರು, ನೋಡಿದ್ದು, ಡಾ|| ಸಿದ್ಧಪ್ಪಾ ಎನ್.ರವರು ಕರುಡು ಪರಿಶೀಲಿಸಿ ಕೊಟ್ಟಿದ್ದಕ್ಕಾಗಿ ಅವರಿಗೆ ನನ್ನ ಕೃತಜ್ಞತೆಗಳು.

ಈ ಪುಸ್ತಕದ ಮುದ್ರಣ ಕೆಲಸದಲ್ಲಿ ಸಹಕರಿಸಿದ ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗ ಮತ್ತು ಮುದ್ರಣಾಲಯದ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ನಾನು ಋಣಿಯಾಗಿದ್ದೇನೆ.

ಡಾ.ನಂದಾ ಪಾಟೀಲ

## ಆಧಾರ ಗ್ರಂಥಗಳು

೧. ಇಂಚರ: ಪಂ. ಬಸವರಾಜ ರಾಜಗುರು ಅಭಿನಂದನಾ ಗ್ರಂಥ (ಸಂ) ಡಾ. ಬಸವರಾಜ ಮಲಶೆಟ್ಟಿ, ಶ್ರೀ. ಜ. ಕೊಟ್ಟುರು ಸ್ವಾಮಿ ಮಠ , ಹೊಸಪೇಟೆ, ೧೯೮೩.

೨. ಪದ್ಮಶ್ರೀ ಪಂ. ಬಸವರಾಜ ರಾಜಗುರು ಷಷ್ಠಿಪೂರ್ತಿ ಸಮಾರಂಭದ ಸ್ಮರಣ ಸಂಚಿಕೆ, ಧಾರವಾಡ, ೧೯೮೨.

೩. ಪದ್ಮಭೂಷಣ ಪಂ. ಬಸವರಾಜ ರಾಜಗುರು ಪುಣ್ಯ ಸ್ಮರಣಾರ್ಥ ಸ್ಮರಣೆ ಸಂಚಿಕೆ, ಧಾರವಾಡ, ೧೯೯೩.

೪. ಗಣಪತಿ ಭಟ್ಟ ಹಾಗೂ ಪರಮೇಶ್ವರ ಹೆಗಡೆಯವರ ಪತ್ರಗಳು

೫. ಶ್ರೀಮತಿ ಭಾರತಿ ಬಸವರಾಜ ರಾಜಗುರು ಹಾಗೂ ಕುಮಾರ ನಿಜಗುಣಿ ರಾಜಗುರು ಅವರೊಂದಿಗೆ ಸಂದರ್ಶನ.

**ಘಟನಾವಳಿಗಳು**

೧೯೧೦ ಆಗಸ್ಟ್೨೪- ಜನನ.

೧೯೧೬- ತಾಯಿಯ ಮರಣ

೧೯೧೯- ವಾಮನರಾವ್‌ಮಾಸ್ತರರ ನಾಟಕ ಕಂಪನಿಗೆ ಸೇರ್ಪಡೆ

೧೯೩೦- ತಂದೆಯ ಮರಣ ಮೂರೂಸಾವಿರ ಮಠಕ್ಕೆ ಸಂಸ್ಕೃತಾಭ್ಯಾಸಕ್ಕೆ ಸೇರ್ಪಡೆ. ಪಂಚಾಕ್ಷರಿ ಗವಾಯಿಗಳವರ ಶಿಷ್ಯತ್ವ ಸ್ವೀಕಾರ

೧೯೩೩- ಎರಡು ಹಾಡುಗಳ ಧ್ವನಿ ಮುದ್ರಣ (ಮುಂಬೈನಲ್ಲಿ)

೧೯೩೬- ಹಂಪೆಯ ವಿಜಯನಗರ ಉತ್ಸವದಲ್ಲಿ ಸಂಗೀತ ಕಛೇರಿ

೧೯೩೮- ಪ್ರತಮ ರೇಡಿಯೋ ಕಾರ್ಯಕ್ರಮ

೧೯೪೦- ಪಂಚಾಕ್ಷರಿ ಗವಾಯಿಗಳವರ ನಾಟಕ ಕಂಪನಿ ಸ್ಥಾಪನೆ ಅದರಲ್ಲಿ ನಟನಾಗಿ ಸೇವೆ.

೧೯೪೧- ಬಸವಜಯಂತಿ-ಕೂಡಲಸಂಗಮದಲ್ಲಿ ಗುರುಗಳ ಆಶೀರ್ವಾದ. ಸ್ವತಂತ್ರ ಗಾಯನ

೧೯೪೩- ಕಲಕತ್ತಾದಲ್ಲಿ ಅಖಿಲ ಭಾರತ ಸಮ್ಮೇಳನದಲ್ಲಿ ಕಛೇರಿ

೧೯೪೩- ಸಿಂಧ, ಪಂಜಾಬಗಳಲ್ಲಿ

೧೯೪೬ ರಿಂದ- ಧಾರವಾಡದಲ್ಲಿ ಖಾಯಂ ವಸತಿ

೧೯೫೨- ಮಹಾದೇವಿಯೊಂದಿಗೆ ಲಗ್ನ

೧೯೫೩ ಆಗಸ್ಟ್೧೫- ಪ್ರಥಮ ರಾಷ್ಟ್ರೀಯ ಸಂಗೀತ ಕಾರ್ಯಕ್ರಮ

೧೯೫೬- ಹೈದ್ರಾಬಾದ್‌ವೀರಶೈವ ಸಮ್ಮೇಳನದಲ್ಲಿ "ಸಂಗೀತ ಸುಧಾಕರ" ಬಿರುದು

೧೯೫೮- ಬೆಂಗಳೂರ "ಸಂಗೀತ ರತ್ನ" ಬಿರುದು

೧೯೬೨- ಮಹಾದೇವಿಯ ಮರಣ

೧೯೬೫- ಭಾರತಿದೇವಿಯೊಂದಿಗೆ ಮರು ಮದುವೆ

೧೯೭೧- ರಾಜ್ಯ ಸಂಗೀತ ನಾಟಕ ಅಕಾಡೆಮಿ ಸದಸ್ಯ

೧೯೭೧- ರಾಜ್ಯ ಸಂಗೀತ ನಾಟಕ ಅಕಾಡೆಮಿ ಪುರಸ್ಕಾರ

೧೯೭೫- ಪದ್ಮಶ್ರೀ ಪ್ರಶಸ್ತಿ

೧೯೭೫- ಹುಬ್ಬಳ್ಳಿ ಮೂರೂಸಾವಿರ ಮಠದಲ್ಲಿ ಸನ್ಮಾನ ಮತ್ತು 'ಸಂಗೀತ ಶಿರೋಮಣಿ' ಬಿರುದು

೧೯೭೬ ರಿಂದ- ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಗೌರವ ಪ್ರಾಧ್ಯಾಪಕ

೧೯೮೧- ಗದುಗಿನ ತೋಂಟದಾರ್ಯ ಮಠದಲ್ಲಿ ಸನ್ಮಾನ ಮತ್ತು "ಅಭಿನವ ಗಂಧರ್ವ" ಬಿರುದು

೧೯೮೨- ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಪುರಸ್ಕಾರ. ಧಾರವಾಡದಲ್ಲಿ ಷಷ್ಟಿಪೂರ್ತಿ ಸಮಾರಂಭ

೧೯೮೨- ಬಸವ ಜಯಂತಿ-ಹೊಸಪೇಟ ಕೊಟ್ಟೂರು ಸ್ವಾಮಿ ಮಠದಲ್ಲಿ ಸನ್ಮಾನ ಮತ್ತು 'ಇಂಚರ' ಅಭಿನಂದನ ಗ್ರಂಥ ಸಮರ್ಪಣೆ

* * *

## ೧. ಪಂ. ಬಸವರಾಜ ರಾಜಗುರು ಅವರ ಜೀವನ

ಪಂ. ಬಸವರಾಜ ರಾಜಗುರು ಅವರು ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕಿನ ಎಲಿವಾಳ ಗ್ರಾಮದವರು. ಅವರ ತಂದೆ ಮಹಾಂತಸ್ವಾಮಿ ಹಾಗೂ ತಾಯಿ ರಾಚವ್ವ ದಂಪತಿಗಳ ಎರಡನೇಯ ಮಗನಾಗಿ ದಿನಾಂಕ: ೨೪-೦೮-೧೯೨೦ ರಂದು ಜನಿಸಿದರು. ರಾಜಗುರು ಅವರ ಮನೆತನವು ಒಕ್ಕಲುತನದ ಮನೆತನವಾಗಿತ್ತು. ಅವರ ತಂದೆಯವರು ಸಂಗೀತಾಸಕ್ತರಾಗಿದ್ದು ತಮಿಳುನಾಡಿನ ತಂಜಾವೂರಿನಲ್ಲಿ ಸಂಗೀತ ಕಲಿತಿದ್ದರು. ಅವರು ಒಳ್ಳೆಯ ಪಿಟೀಲುವಾದಕರಾಗಿದ್ದರು. ಬಸವರಾಜರವರ ದೊಡ್ಡಪ್ಪನವರು ಸಂಸ್ಕೃತ ವಿದ್ವಾಂಸರು, ಜೋತಿಷಿಗಳು ಆಗಿದ್ದರೆಂದು ತಿಳಿದುಬರುತ್ತದೆ.

ರಾಜಗುರು ಅವರ ಮನೆತನದಲ್ಲಿ ಸಾಕಷ್ಟು ತಾಪತ್ರಯಗಳು ಉಂಟಾದವು. ಬಸವರಾಜ ಅವರು ಆರು ವರ್ಷದ ಬಾಲಕನಿರುವಾಗ ಅವರ ತಾಯಿ ತೀರಿಕೊಂಡರು. ಪಾಪ ಅವರ ತಂದೆ ಮತ್ತೊಂದು ಮದುವೆಯಾಗದೇ ಮಕ್ಕಳನ್ನು ಜೋಪಾನ ಮಾಡಿದರು. ಅವರು ಮಕ್ಕಳಾದ ಬಸವರಾಜ ಹಾಗೂ ಸಿದ್ದಯ್ಯನವರಿಗೆ ಪಿಟೀಲು ಬಾರಿಸುತ್ತ ಹಾಡಿ ಪಾಠ ಹೇಳುತ್ತಿದ್ದರು. ಸುಮಾರು ಎರಡು ಮೂರು ವರ್ಷಗಳಲ್ಲಿ ಮಹಾಂತಸ್ವಾಮಿಯವರು ನಿಧನರಾದರು. ಅಲ್ಪ-ಸ್ವಲ್ಪ ಸಾಲಕ್ಕಾಗಿ ಸಾಲಗಾರರು ಅವರ ಇಡೀ ಜಮೀನನ್ನು ತಮ್ಮ ವಶಕ್ಕೆ ತೆಗೆದುಕೊಂಡರು.

ಈಗ ಯುವಕ ಬಸವರಾಜರು ಮಾಡುವುದಾದರೂ ಏನು? ಆಗ ಅವರ ದೊಡ್ಡಪ್ಪನ ಮಗ, ಕೆಳದಿ ಸಂಸ್ಥಾನದ ಮಠಾಧಿಪತಿಗಳಾಗಿದ್ದ ಶ್ರೀ ರೇವಣಸಿದ್ಧ ಶಿವಾಚಾರ್ಯರು ರಾಜಗುರು ಅವರ ಸಹಾಯಕ್ಕೆ ಬಂದರು. ಅವರು ಬಸವರಾಜರಿಗೆ ಸಂಸ್ಕೃತ ಶಿಕ್ಷಣವನ್ನು ನೀಡಲು ಅವರನ್ನು ಹುಬ್ಬಳ್ಳಿಯ ಮೂರು ಸಾವಿರ ಮಠಕ್ಕೆ ತಂದು ಬಿಟ್ಟರು . ರಾಜಗುರು ಅವರು ಮೂರುಸಾವಿರ ಮಠದಲ್ಲಿ ಶಿಸ್ತಿನಿಂದ ಅಧ್ಯಯನದಲ್ಲಿ ನಿರತರಾಗಿರಲು ಅಲ್ಲೊಂದು ಘಟನೆ ನಡೆಯಿತು. ಅಲ್ಲಿಗೆ ಶ್ರೀ ಪಂಚಾಕ್ಷರಿ ಗವಾಯಿಗಳವರು ಆಗಮಿಸಿದ್ದರು. ಶ್ರೀ ಗುರುಸಿದ್ಧ ಸ್ವಾಮಿಗಳವರು ರಾಜಗುರು ಅವರನ್ನು ಗವಾಯಿಗಳಿಗೆ ಪರಿಚಯಿಸುತ್ತಾ 'ಈ ಹುಡುಗ ಬಹಳ ಚಲೋ ಹಾಡ್ತಾನ, ಇವ್ನ ನಿಮ್ಮ ಸಂಗಡ ಕರಕೊಂಡು ಹೋಗ್ರಿ'

ಎಂದು ಶಿಫಾರಸು ಮಾಡಿದರು. ಆಗ ಪಂಚಾಕ್ಷರಿ ಗವಾಯಿಗಳವರು ರಾಜಗುರು ಅವರನ್ನು ತಮ್ಮ ಹತ್ತಿರ ಕರೆದು, ಮೈದಡವಿ, 'ಮಗು ಒಂದ ಹಾಡ ಹೇಳಪಾ' ಎಂದರು. ಆಗ ರಾಜಗುರು ಅವರು ಧೈರ್ಯದಿಂದ 'ಭಕ್ತ ಜೀವನ ರಾಮಾ ಸುಜನ ಜೀವನ' ಎಂಬ ಪದವನ್ನು ಹಾಡಿದರು. ಗುರುಗಳು ಬಾಲಕನ ಹಾಡನ್ನು ಮೆಚ್ಚಿ ರಾಜಗುರು ಅವರನ್ನು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿದರು. ಬಸವರಾಜ ರಾಜಗುರು ಅವರು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿದರು. ಬಸವರಾಜ ರಾಜಗುರು ಅವರು ತಮ್ಮ ಲೇಖನ 'ಸ್ಮೃತಿ ಸಂಪುಟದಲ್ಲಿ' ಈ ಘಟನೆಯು ಅವರು ಜೀವನದ ಅತ್ಯಂತ ಮಹತ್ವದ ಗಳಿಗೆಯಾಗಿತ್ತು ಎನ್ನುತ್ತಾರೆ. ಅವರು ಅದೆಲ್ಲ ಅವರ ಪೂರ್ವಜನ್ಮದ ಪುಣ್ಯದ ಫಲವೆಂದು ಭಾವಿಸುತ್ತಾರೆ. ಅವರು ತಾವು ಮುಂದೆ ಪಡೆದ ಭಾಗ್ಯಕ್ಕೆಲ್ಲ ಪಂಚಾಕ್ಷರಿ ಗವಾಯಿಗಳೇ ಕಾರಣ ಎನ್ನುತ್ತಾರೆ. ಈ ಘಟನೆ ನಡೆದದ್ದು ೧೯೩೦ ಜೂನ್‌ತಿಂಗಳಿನಲ್ಲಿ.

ಶ್ರೀ ಪಂಚಾಕ್ಷರಿ ಗವಾಯಿಗಳವರು ಸಂಚಾರಿ ಪಾಠಶಾಲೆಯನ್ನು ಹೊಂದಿದ್ದರು. ಅವರು ಸುಮಾರು ಅರವತ್ತು ವಿದ್ಯಾರ್ಥಿಗಳನ್ನು ಕಟ್ಟಿಕೊಂಡು ಅವರಿಗೆ ಶಿಕ್ಷಣವನ್ನು ನೀಡುತ್ತಿದ್ದರು . ಯಾರಿಗೂ ಪ್ರಸಾದದ ಭಾರವಾಗಬಾರದೆಂದು ಗುರುಗಳು ಈ ವಿದ್ಯಾರ್ಥಿಗಳೊಂದಿಗೆ ಊರಿಂದ ಊರಿಗೆ ಸಂಚರಿಸುತ್ತಿದ್ದರು. ರಾಜಗುರು ಅವರು ಅವರ ಗುರುಗಳ ವ್ಯಕ್ತಿತ್ವದ ಪ್ರಭಾವ ದೊಡ್ಡದಾಗಿತ್ತು ಎನ್ನುತ್ತಾರೆ. ಅವರಿಗೆ ಅಸಂಖ್ಯಾತ ಜನ ಶ್ರೀಮಂತರು ಧಾರಾಳವಾಗಿ ಸಹಾಯ ಸಲ್ಲಿಸುತ್ತಿದ್ದರು. ಪ್ರತಿದಿನ ಬೆಳಿಗ್ಗೆ ನಾಲ್ಕರಿಂದ ಎಂಟರವರೆಗೆ ಹಾಗೂ ಮಧ್ಯಾಹ್ನ ನಾಲ್ಕರಿಂದ ಸಂಜೆ ಏಳವರೆಗೆ ಸತತವಾದ ಸಂಗೀತಾಭ್ಯಾಸ ನಡೆಯುತ್ತಿತ್ತು. ಮಧ್ಯಾಹ್ನ ಸ್ನಾನ, ಪೂಜೆ, ಊಟ ಹಾಗೂ ವಿಶ್ರಾಂತಿಗಾಗಿ ಅವಕಾಶವಿರುತ್ತಿತ್ತು. ಉಳಿದ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಕನ್ನಡ, ಸಂಸ್ಕೃತಗಳ ಅಭ್ಯಾಸವಿರುತ್ತಿತ್ತು.

೧೯೩೦ರಲ್ಲಿ ರಾಜಗುರು ಅವರ ಕ್ಯಾಂಪು ಕೊಪ್ಪಳದಲ್ಲಿ ವಾಸ್ತವ್ಯ ಹೂಡಿತ್ತು. ಆಗ ಕೊಪ್ಪಳವು ಹೈದ್ರಾಬಾದದ ನಿಜಾಮರಿಗೆ ಸೇರಿತ್ತು. ಆಕಸ್ಮಾತಾಗಿ ಹೈದ್ರಾಬಾದದ ನಿಜಾಮರಾದ ಸಾಲಾರಜಂಗರು ಆಗ ಕೊಪ್ಪಳಕ್ಕೆ ಭೇಟಿ ನೀಡಿದ್ದರು. ಅವರು ಸಂಗೀತ ಪ್ರಿಯರಾಗಿದ್ದರು. ಆಗ ಅವರು ಮುದಗಲ್‌ಸಂಗಪ್ಪನವರ ಬಂಗಲೆಯಲ್ಲಿ ಕ್ಯಾಂಪ್‌ಹಾಕಿದ್ದರು. ನಿಜಾಮರು ಗದುಗಿನ ಜೀವೊಸಾನಿ ಮತ್ತು ಆದವಾನಿ ಲಕ್ಷ್ಮೀದೇವಿ ಮುಂತಾದ ಪಾತ್ರದವರನ್ನು ಹಾಡಲು ಕರೆಸಿದ್ದರು. ಆಗ ಪಂಚಾಕ್ಷರಿ ಗವಾಯಿಗಳವರ ಕ್ಯಾಂಪ್‌ಕೊಪ್ಪಳದಲ್ಲಿದ್ದರಿಂದ ಅವರಿಗೂ ಆಮಂತ್ರಣ ಬಂದಿತ್ತು. ಆ ಪಾತ್ರದ ಹೆಂಗಸರು ಹಾಡಿದ ಮೇಲೆ ಇವರ ಸರತಿ ಬಂತಂತೆ. ಆಗ ರಾಜಗುರು ಅವರು 'ಸಖಿ ಮುಖ ಚಂದ್ರಯೆಂಬ' ಖಂಬಾವತಿರಾಗದ ಚೀಜನ್ನು ಮತ್ತು ಒಂದು ಗಜಲ್‌ನ್ನು ಹಾಡಿದರು. ನಿಜಾಮರು ರಾಜಗುರು ಅವರ ಹಾಡನ್ನು ಮೆಚ್ಚಿ ಅವರಿಗೆ ಒಂದು ಚಿನ್ನದ ವರಹವನ್ನು ನೀಡಿದರು.

೧೯೩೩ರಲ್ಲಿ ಶ್ರೀ ಪಂಚಾಕ್ಷರಿ ಗವಾಯಿಗಳ ವಿದ್ಯಾರ್ಥಿಗಳ ಕ್ಯಾಂಪು ಹೊಸಪೇಟೆ ತಾಲೂಕಿನ ರಾಮಸಾಗರದಲ್ಲಿತ್ತು. ಆಗ ಮುಂಬಯಿಯ ಎಚ್.ಎಮ್.ವಿ. ಕಂಪನಿಯವರಿಂದ ರಾಜಗುರು ಅವರಿಗೆ ಧ್ವನಿ ಮುದ್ರಣಕ್ಕಾಗಿ ಆಮಂತ್ರಣ ಬಂದಿತು. ಆಗ ಗವಾಯಿಗಳವರು, ಪುಟ್ಟಯ್ಯನವರು ಹಾಗೂ ಇನ್ನಿಬ್ಬರೊಂದಿಗೆ ರಾಜಗುರು ಅವರು ಮುಂಬಯಿಗೆ ಹೋದರು. ಅಂದು ಧ್ವನಿ ಮುದ್ರಣದ ಪದ್ಧತಿ ಬಹು ಕಷ್ಟಕರವಾಗಿದ್ದಿತ್ತು ಅಂದರೆ ಅವರು ಒಂದು ತಿಂಗಳವರೆಗೆ ಪ್ರತಿದಿನ ಸಾಯಂಕಾಲ ಕಂಪನಿಗೆ ಹೋಗಿ ಪ್ರಾಕ್ಟೀಸ್‌ಕೊಡಬೇಕಾಗಿತ್ತು. ಆ ಅವಧಿಯ ಖರ್ಚು-ವೆಚ್ಚವನ್ನೆಲ್ಲ ಕಂಪನಿಯವರೇ ಕೊಡುತ್ತಿದ್ದರು. ರಾಜಗುರು ಅವರಿಗೆ ಬೇಕಾಗಿದ್ದ ಹತ್ತರಕಿ ನಂದೆಪ್ಪ, ಗೂಗವಾಡ ಚೆನ್ನಪ್ಪ, ತಿಪಶೆಟ್ಟಿ ಮಹಾಂತಪ್ಪ ಮುಂತಾದ ಕನ್ನಡಿಗರ ಪರಿಚಯವಾಯಿತು. ಈ ಮಹನೀಯರೆಲ್ಲ ಶ್ರೀ ಪಂಚಾಕ್ಷರಿ ಗವಾಯಿಗಳನ್ನು ತುಂಬಾ ಅಭಿಮಾನದಿಂದ ಕಾಣುತ್ತಿದ್ದರು. ರಾಜಗುರು ಅವರು ಮುಂಬಯಿ ಬೃಹನ್ನ್‌ಗರಿಯಲ್ಲಿ ಕನ್ನಡಿಗರ ಪರಿಚಯ ಮಾಡಿಕೊಂಡು ಸುಖವಾಗಿದ್ದರು.

ರಾಜಗುರು ಅವರು ಪುಟ್ಟಯ್ಯ ಹಾಗೂ ಪಂಚಾಕ್ಷರಿ ಗವಾಯಿಗಳೊಂದಿಗೆ ಒಂದು ದಿನ ಧ್ವನಿ ಮುದ್ರಣಕ್ಕಾಗಿ ಹಾಡಿದರು. ರಾಜಗುರು ಅವರು ಹಾನಗಲ್ಲ ಕುಮಾರಸ್ವಾಮಿಗಳ ಮೇಲೆ ಎರಡು ಭಕ್ತಿಗೀತೆಗಳನ್ನು ಹಾಡಿದ್ದು ತಿಳಿದುಬರುತ್ತದೆ. ಆಗ ಮುಂಬಯಿಯಲ್ಲಿ ಗಣೇಶ ಚತುರ್ಥಿ ಇರಲು ರಾಜಗುರು ಮತ್ತು ಸಂಗಡಿಗರು ಸಂಗೀತ ಕಾರ್ಯಕ್ರಮಗಳನ್ನು ನಡೆಸಿದರು. ಮುಂದೆ ಅವರು ಪುಣೆ, ಕೊಲ್ಲಾಪೂರ, ಮಿರಜ್, ಬೆಳಗಾಂವಗಳಲ್ಲಿ ಟಿಕೇಟು ಇಟ್ಟು ಸಂಗೀತ ಕಾರ್ಯಕ್ರಮಗಳನ್ನು ನಡೆಸುತ್ತ, ಹಣವನ್ನು ಗಳಿಸುತ್ತ ರಾಮಸಾಗರಕ್ಕೆ ವಾಪಸ್ಸು ಬಂದರು.

ಶ್ರೀ ಪಂಚಾಕ್ಷರಿ ಗವಾಯಿಗಳವರು ೧೯೩೬ ರಲ್ಲಿ ಗಜೇಂದ್ರಗಡದಲ್ಲಿ ಕ್ಯಾಂಪ್‌ಹಾಕಿದ್ದು ತಿಳಿದು ಬರುತ್ತದೆ. ಆಗ ಅಲ್ಲಿಯ ಸಂಸ್ಥಾನಿಕರಾದ ಘೋರ್ಪಡೆಯವರ ಮಗನ ಲಗ್ನ ವೈಭವದಿಂದ ನಡೆಯಿತು. ಆ ಮದುವೆಗಾಗಿ ಕೊಲ್ಲಾಪೂರದ ಕನ್ಯಾ ಪಕ್ಷದವರು ತಮ್ಮೊಂದಿಗೆ ಅಬ್ದುಲ್‌ಕರೀಮಖಾನ್‌ಸಾಹೇಬರನ್ನು ಕರೆದುಕೊಂಡು ಬಂದಿದ್ದರು. ಅವರ ಸಂಗೀತ ಕಾರ್ಯಕ್ರಮವಾದ ಮರುದಿನವೇ ರಾಜಗುರು ಸಂಗಡಿಗರಿಂದ ಸಂಗೀತ ಕಛೇರಿ ಆರಂಭವಾಯಿತು. ಎಂದಿನಂತೆ ಪಂಚಾಕ್ಷರಿ ಗವಾಯಿಗಳವರು ರಾಜಗುರು ಅವರನ್ನು ಮೊದಲು ಹಾಡಿಸಿದರು. ಅಬ್ದುಲ್‌ಕರೀಮಖಾನ್‌ಸಾಹೇಬರು ರಾಜಗುರು ಅವರ ಸಂಗೀತವನ್ನು ಮೆಚ್ಚಿಕೊಂಡರು.

ಪಂ.ಬಸವರಾಜ ರಾಜಗುರು ಹೇಳುವಂತೆ ಶ್ರೀ ಪಂಚಾಕ್ಷರಿ ಗವಾಯಿಗಳವರ ಮಹಿಮೆ ಅಗಾಧವಾಗಿತ್ತು. ಒಮ್ಮೆ ಗುರುಗಳು ಮಾರನಬಸರಿ ಎಂಬ ಊರಲ್ಲಿ ಕ್ಯಾಂಪ್‌ಹಾಕಿದ್ದರು. ಊರ ಹೊರಗಿನ ದೇವಾಲಯದಲ್ಲಿ ಅವರ ಕೀರ್ತನೆ ನಡೆದಿತ್ತು. ಅವರ ಕೀರ್ತನೆಯೆಂದರೆ ಅದರಲ್ಲಿ ಅರ್ಧ ಶಾಸ್ತ್ರೀಯ ಸಂಗೀತವಿರುತ್ತಿತ್ತು. ಆಗ ಪಂ. ರಾಜಗುರು ಅವರೊಂದಿಗೆ ತಂಬೂರಿ ಹಿಡಿದು ಸಾಥಿಗಾಗಿ ಕುಳಿತ್ತಿದ್ದರು. ತಂಬೂರಿ ನುಡಿಸುತ್ತ ರಾಜಗುರು ಮೇಲೆ ನೋಡಿದರಂತೆ. ಮೇಲೆ ಬಿದರಿನ ಛಾವಣಿ ಇತ್ತು. ಆ ಮೇಲ್ಛಾವಣಿಯಲ್ಲಿ ಅವರಿಗೆ ಏನೋ ಕಂಡಂತಾಯಿತು. ಅದನ್ನು ತಕ್ಷಣ ನೋಡಲಾಗಿ ಅದೊಂದು ನಾಗರಹಾವು ಇತ್ತು. ಅದನ್ನು ಕಂಡ ರಾಜಗುರು ನಡುಗ ತೊಡಗಿದರಂತೆ. ಒಂದರ್ಧಗಳಿಗೆಯಲ್ಲಿ ಆ ಹಾವು ದೊಪ್ಪನೆ ಗುರುಗಳ ಮುಂದೆ ಬಿದ್ದಿತಂತೆ. ಆಗ ಜನರೆಲ್ಲರೂ ಗಾಬರಿಯಾಗಿ ಎದ್ದು ನಿಂತರು. ರಾಜಗುರು ಅವರು ತಂಬೂರಿಯೊಂದಿಗೆ ಒಂದು ಮೂಲೆಯನ್ನು ಸೇರಿದರು. ಗುರುಗಳು ಇದೇನು? ಹೀಗೇಕೆ? ಎಂದು ವಿಚಾರಿಸಿದರು. ಅವರ ಮುಂದೆಯೇ ಹಾವು ಇರುವುದನ್ನು ತಿಳಿಸಲಾಯಿತು. ಆಗ ಗವಾಯಿಗಳು ಶಾಂತ ಸ್ವರದಲ್ಲಿ 'ಅದೇನೂ ಮಾಡುವುದಿಲ್ಲ. ಅದಕ್ಕೇನೂ ಮಾಡಬೇಡ್ರಿ, ನಾವೀಗ ಶಿವನ ಸಂಕೀರ್ತನೆ ನಡೆಸುತ್ತಿದ್ದೇವೆ. ಇಂಥಾಹೊತ್ತಿನ್ಯಾಗ ಎಲ್ಲಾದರೂ ತೊಂದ್ರೆಯಾದಿತು,' ಎಂದು ಹೇಳಿ ಕೈ ಮುಗಿದುಕೊಂಡು ಕುಳಿತಿರಲು ಆ ಹಾವು ಅವರ ತೊಡೆಗೆ ಹತ್ತಿಕೊಂಡು ಸರಿಯುತ್ತ ಗರ್ಭಗುಡಿ ಸೇರಿ ಮಾಯವಾಯಿತು. ಅವರ ಕೀರ್ತನೆ ಮುಂದುವರೆಯಿತು.

ರಾಜಗುರು ಮತ್ತು ಗುರುಗಳ ಕ್ಯಾಂಪ್‌ಒಮ್ಮೆ ಅಕ್ಕಿ ಆಲೂರಿನಲ್ಲಿತ್ತು. ಆಗ ಮಿರಜುದ ಶ್ರೀ ನಿಲಕಂಠ ಬುವಾ ಅವರು ಬಂದು ಗವಾಯಿಗಳೊಂದಿಗೆ ಸುಮಾರು ತಿಂಗಳುಗಳ ಕಾಲ ಅಲ್ಲಿ ನೆಲೆನಿಂತರು. ಶ್ರೀ ನೀಲಕಂಠ ಬುವಾ ಶ್ರೀ ಪಂಚಾಕ್ಷರಿ ಗವಾಯಿಗಳವರ ಗುರುಗಳಾಗಿದ್ದರೆಂದು ತಿಳಿದು ಬರುತ್ತದೆ. ಅವರಿಂದ ಹಿಂದೂಸ್ತಾನೀ ಸಂಗೀತವನ್ನು ಕಲಿತು ಪ್ರೌಢವ್ಯವಸ್ಥೆಗೆ ಬಂದಿದ್ದರೂ ಪಂಚಾಕ್ಷರಿ ಗವಾಯಿಗಳಿಗೆ ಇನ್ನೂ ಕಲಿಯಬೇಕೆಂದು ಹಂಬಲವಿತ್ತು. ಗುರುಗಳು ವಿದ್ಯಾರ್ಥಿಗಳಂತೆ ಚೀಜ ಹೇಳಿಸಿಕೊಳ್ಳುತ್ತಿದ್ದರು. ರಾಜಗುರು ಅದನ್ನು ಕೇಳಲಿದರು. ಕೆಲವು ಸಲ ನೀಲಕಂಠ ಬುವಾ ಅವರು ರಾಜಗುರು ಅವರಿಗೂ ಪಾಠ ಹೇಳುತ್ತಿದ್ದರು. ನೀಲಕಂಠ ಬುವಾ ಅವರದು ಗಂಭೀರವಾದ ವ್ಯಕ್ತಿತ್ವವಾದ್ದರಿಂದ ರಾಜಗುರು ಅವರ ಸೇವೆಯನ್ನು ಭಯ-ಭಕ್ತಿಯಿಂದ ಮಾಡುತ್ತಿದ್ದರಂತೆ.

೧೯೩೬ರಲ್ಲಿ ಹಂಪಿಯಲ್ಲಿ ನಡೆದ ವಿಜಯನಗರ ಮಹೋತ್ಸವು ಪಂ. ರಾಜಗುರು ಅವರ ಬದುಕಿನಲ್ಲಿ ಮರೆಯಲಾಗದ ಅನುಭವವನ್ನು ಉಂಟು ಮಾಡಿತೆಂದು ಹೇಳಬಹುದು. ಇಲ್ಲಿಯವರೆಗೆ ಸಣ್ಣ ಪುಟ್ಟ ಕಾರ್ಯಕ್ರಮಗಳಲ್ಲಿ ಸಂಗೀತ ಕಾರ್ಯಕ್ರಮವನ್ನು ನೀಡಿದ ಅವರೀಗ ಬಹುದೊಡ್ಡ ಕಾರ್ಯಕ್ರಮದಲ್ಲಿ ಸಂಗೀತ ಕಛೇರಿ ನೀಡುವ ಸುಯೋಗ ಪಡೆದಿದ್ದರು. ಅಲ್ಲಿ ಸುಮಾರು ಹದಿನೈದು ಸಾವಿರ ಜನರು ಸೇರಿದ್ದರು. ಅಂಥ ಜನಸಾಗರದ ಮುಂದೆ ಸಂಗೀತ ಕಛೇರಿ ನೀಡುವ ಅವರ ಅವಕಾಶಕ್ಕೆ ಗುರುಗಳು ಕಾರಣವಾಗಿದ್ದರು. ಅವರೇ ರಾಜಗುರುಗಳಿಗೆ ತಬಲಾಸಾಥಿ ನೀಡಿದರು. ಎಡಗಡೆ ಪುಟ್ಟಯ್ಯನವರ ಹಾರ್ಮೋನಿಯಂ ಸಾಥಿ ಇತ್ತು. ಗುರುಗಳ ಪಕ್ಕದಲ್ಲಿರುವಾಗ ಇನ್ನೇತರ ಭಯ? ಪಂ. ರಾಜಗುರು ಅವರು ನಿರರ್ಗಳವಾಗಿ ಭಾಗೇಶ್ರೀ ಹಾಡಿದರು. ನಂತರ ಅವರು ನಿಜಗುಣ ಶಿವಯೋಗಿಗಳ 'ನೋಡಲಾಗದೆ' ಎಂಬ ಪದವನ್ನು ಹಾಡಿದರು. ಶ್ರೋತೃಗಳು ರಾಜಗುರು ಸಂಗೀತವನ್ನು ಬಹಳಷ್ಟು ಮೆಚ್ಚಿಕೊಂಡರು. ಮೈಸೂರ ಆಸ್ಥಾನದ ಸಂಗೀತ ವಿದ್ವಾನ್‌ಚಿಕ್ಕರಾಮರಾಯ ಎಂಬುವರು ಎದ್ದು ವೇದಿಕೆಗೆ ಬಂದು ಅವರ ಬೆನ್ನು ಚಪ್ಪರಿಸಿ ಅವರ ಗುರುಗಳಿಗೆ 'ನೀವು ಒಳ್ಳೆಯ ಶಿಷ್ಯರನ್ನು ಸಂಪಾದಿಸಿದ್ದೀರಿ' ಎಂದರು. ಹಂಪಿ ಸಂಗೀತ ಉತ್ಸವ ಸಮಿತಿಯವರು ರಾಜಗುರು ಅವರಿಗೆ ಚಿನ್ನದ ಪದಕದೊಂದಿಗೆ ಐವತ್ತು ರೂಪಾಯಿಯ ಕಾಣಿಕೆಯನ್ನು ನೀಡಿ ಗೌರವಿಸಿದರು. ರಾಜಗುರು ಅವರಿಗೆ ಈ ಕಛೇರಿ ತಂದ ಸಂತೋಷ ಅಷ್ಟಿಷ್ಟಲ್ಲ.

ರಾಜಗುರು ಅವರ ಸ್ವತಂತ್ರಗಾಯನದ ಪ್ರಥಮ ರೇಡಿಯೋ ಕಾರ್ಯಕ್ರಮವು ೧೯೩೮ ರಲ್ಲಿ ಮುಂಬಯಿಯಿಂದ ಪ್ರಸಾರವಾಯಿತು. ಅವರೊಬ್ಬರೆ ಮುಂಬಯಿಗೆ ಹೋಗಿ ಈ ಕಾರ್ಯಕ್ರಮವನ್ನು ನೀಡಿದ್ದರು. ಇದರಿಂದಾಗಿ ಅವರ ಹೆಸರು ಬಹಳಷ್ಟು ಪ್ರಸಿದ್ಧವಾಯಿತು.

೧೯೪೦ರ ವರ್ಷ. ಆ ವರ್ಷದಲ್ಲಿ ರಾಜಗುರು ಅವರು ಬೆಂಗಳೂರಿನಲ್ಲಿ ಎಂಟು ತಿಂಗಳುಗಳ ಕಾಲ ಕ್ಯಾಂಪ್‌ಹಾಕಿದ್ದರು. ಆ ವರ್ಷ ಸಂಗೀತ ಕಛೇರಿಗಳಿಂದ ಬಂದ ಆದಾಯ ಖರ್ಚಿಗೆ ಸಾಲದೇ ಪಂಚಾಕ್ಷರಿ ಗವಾಯಿಗಳು ಹದಿನೈದು ಸಾವಿರ ರೂಪಾಯಿಯ ಸಾಲವನ್ನು ಮಾಡಿದರು. ಅವರು ಈ ಸಾಲವನ್ನು ತೀರಿಸಲು ಒಂದು ನಾಟಕ ಕಂಪನಿಯನ್ನು ಕಟ್ಟಿದರು. ಅದರ ಹೆಸರು ಸಿದ್ಧರಾಮೇಶ್ವರ ನಾಟಕ ಕಂಪನಿಯೆಂದು. ರಾಜಗುರು ಅವರು ಅಲ್ಲಿ ಹಿರಿಯ ಸಿದ್ಧರಾಮೇಶ್ವರನ ಪಾತ್ರ ವಹಿಸುತ್ತಿದ್ದರು. ಅವರು ಇತರ ನಾಟಕಗಳಾದ ರಾಜಶೇಖರ ವಿಳಾಸದಲ್ಲಿ ಶಿವಾಚಾರ್ಯರಾಗಿ, ಸತಿ ಸುಕನ್ಯಾದಲ್ಲಿ ಬೃಹಸ್ಪತಿಯಾಗಿ ಹಾಗೂ ಹೇಮರೆಡ್ಡಿ ಮಲ್ಲಮ್ಮನಲ್ಲಿ ಮಲ್ಲಿಕಾರ್ಜುನನ ಪಾತ್ರವನ್ನು ವಹಿಸುತ್ತಿದ್ದರು. ಈ ನಾಟಕ ಹವ್ಯಾಸದಿಂದಾಗಿ ಅವರ ಆರೋಗ್ಯದ ಮೇಲೆ ಪರಿಣಾಮವಾಯಿತು. ಆಗ ಕೆಲವು ಹಿರಿಯ ಹಿತೈಷಿಗಳು ಶ್ರೀ ಪಂಚಾಕ್ಷರಿ ಗವಾಯಿಗಳಿಗೆ ರಾಜಗುರು ಅವರಿಗೆ ಒಳ್ಳೆಯ ಭವಿಷ್ಯವಿದೆಯೆಂದು, ಅವರು ನಾಟಕಗಳಲ್ಲಿ ಭಾಗವಹಿಸುವುದು ಬೇಡವೆಂದು ಸಲಹೆ ನೀಡಿದರು. ರಾಜಗುರು ಅವರ ಕಂಪನಿ ೧೯೪೧ ರಲ್ಲಿ ಕೂಡಲಸಂಗಮದಲ್ಲಿ ಕ್ಯಾಂಪ್‌ಹಾಕಿತು. ಬಸವ ಜಯಂತಿಯ ದಿನ ಗುರುಗಳು ರಾಜಗುರು ಅವರನ್ನು ತಮ್ಮ ಹತ್ತಿರ ಕರೆದು 'ನಾನು ಕಲಿಸಿದ ವಿದ್ಯೆಯನ್ನು ಕಾಪಾಡಿಕೊ. ದುಶ್ಚಟಗಳಿಗೆ ಬಲಿಯಾಗಬೇಡ. ನಿನಗೆ ಒಳ್ಳೆಯ ಭವಿಷ್ಯವಿದೆ' ಎಂದರು. ಈಗ ಬಸವರಾಜರಿಗೆ ಧರ್ಮ ಸಂಕಟವಾಯಿತು. ಈಗ ಅವರಿಗೆ ಪ್ರೀತಿಯ ಗುರುಗಳನ್ನು ಅಗಲುವ ನೋವು ಒಂದೆಡೆ ಇದ್ದರೆ ಸಂಗೀತಗಾರನಾಗಿ ಭಾರತವನ್ನು ಸುತ್ತಾಡಿ ಹೆಸರನ್ನು ಪಡೆಯುವ ಉತ್ಸಾಹ ಇನ್ನೊಂದೆಡೆ.

ಆಗಲೇ ಬಸವರಾಜ ಅವರಿಗೆ ಮುಂಬೈ-ಪುಣೆ ನಗರಗಳು ಚಿರಪರಿಚಿತವಾಗಿದ್ದವು . ಅವರು ಆಗಾಗ ಆ ನಗರಗಳಿಗೆ ಹೋಗಿ ಸಂಗೀತ ಕಛೇರಿಗಳನ್ನು ನೀಡಿ ಅಲ್ಲೆಲ್ಲ ಅಭಿಮಾನಿಗಳ ಬಳಗಗಳನ್ನು ಸ್ಥಾಪಿಸಿಕೊಂಡಿದ್ದರು. ಹೀಗಾಗಿ ಗುರುಗಳಿಂದ ಬಿಡುಗಡೆ ಹೊಂದಿದ ರಾಜಗುರು ಅವರು ಮುಂಬೈಗೆ ಹೋದರು.

ಪಂ. ರಾಜಗುರು ಅವರು ಮುಂಬೈಯಲ್ಲಿ ಸುಮಾರು ಎರಡು ವರ್ಷಗಳ ಕಾಲ ನೆಲಸಿದರು. ಅಲ್ಲಿ ಅವರು ಸಂಗೀತ ಕಛೇರಿಯನ್ನು ನೀಡುತ್ತ, ಹೆಚ್ಚಿನ ಸಂಗೀತವನ್ನು ಕಲಿಯುತ್ತ ಕಾಲ ಕಳೆದರು. ಈಗ ಅವರೊಂದಿಗೆ ಒಂದೆಡೆ ವಾಸವಾಗಿದ್ದವರಲ್ಲಿ ಕುಂದಗೋಳದ ಸವಾಯಿ ಗಂಧರ್ವರು ಒಬ್ಬರು. ಪಂ. ರಾಜಗುರು ಅವರು ಕಿರಾಣಾ ಘರಾಣೆಯ ಹೆಸರಾಂತ ಗಾಯಕರಾದ ಶ್ರೀ ಅಬ್ದುಲ್‌ಕರೀಮಖಾನ ಸಾಹೇಬರ ಪುತ್ರ ಶ್ರೀ ಸುರೇಶಬಾಬು ಮಾನೆ ಮತ್ತು ಜೈಪುರ ಘರಾಣೆಯ ಶ್ರೀ ದಿನಕರ ಪಾಠಕ ಅವರಿಂದ ಹೊಸ ಅಂಶವನ್ನು ಕಲಿತುಕೊಂಡರು. ಪಂ. ರಾಜಗುರು ಅವರು ಆಗಾಗ ಪುಣೆಗೆ ಹೋಗುತ್ತಿದ್ದರು. ಅಲ್ಲಿ ಅವರಿಗೆ ಅನೇಕ ಜನ ಒಳ್ಳೆಯ ಶಿಷ್ಯರು ದೊರೆತರು. ಅವರಲ್ಲಿ ಸುಪ್ರಸಿದ್ಧ ಗಾಯಕಿ ಶ್ರೀಮತಿ ಮಾಣಿಕ ವರ್ಮಾ ಒಬ್ಬರಾಗಿದ್ದರು. ಪಂ. ರಾಜಗುರು ಅವರು ೧೯೪೩ ರಲ್ಲಿ ಮಹಾರಾಷ್ಟ್ರದ ನಾಗಪುರದಲ್ಲಿ ನಡೆದ ಅಖಿಲ ಭಾರತ ಸಂಗೀತ ಸಮ್ಮೇಳನದಲ್ಲಿ ಪ್ರಥಮ ಬಾರಿಗೆ ಭಾಗವಹಿಸಿ ಅಲ್ಲಿ ಅಸಂಖ್ಯಾತ ಸಂಗೀತ ಪ್ರೇಮಿಗಳ ಮೆಚ್ಚುಗೆಗೆ ಪಾತ್ರರಾದರು.

ಪಂ. ರಾಜಗುರು ಅವರು ಆಶಾವಾದಿಗಳು. ಅವರು ಕಷ್ಟ ಸಹಿಷ್ಣುಗಳು ಆಗಿದ್ದರು. ನಿಂತಲ್ಲಿ ನಿಲ್ಲದೆ ನಾಡು ದೇವನ್ನೆಲ್ಲ ಸಂಚರಿಸಿ ಹೆಸರು ಗಳಿಸಬೇಕೆಂಬುದು ಅವರ ಧ್ಯೇಯವಾಗಿತ್ತು. ಅಂತೆಯೇ ಅವರು ೧೯೪೩ ರಿಂದ ೧೯೪೭ ರವರೆಗೆ ಪಾಕಿಸ್ತಾನದಲ್ಲಿದ್ದರು. ಅವರು ಅಲ್ಲಿಯ ಪ್ರಮುಖ ಪಟ್ಟಣಗಳಲ್ಲಿ ಸಂಗೀತ ಕಛೇರಿಗಳನ್ನು ನೀಡಿ ಜನಪ್ರಿಯತೆಯನ್ನು ಗಳಿಸಿದರು. ಅವರು ಕರಾಚಿಯಲ್ಲಿಯ ಲತೀಫಖಾನ ಸಾಹೇಬರ ಹತ್ತಿರ ಆರು ತಿಂಗಳುಗಳ ಕಾಲ ಸಂಗೀತ ಅಭ್ಯಾಸ ಮಾಡಿದರು. ಒಂದು ಸಲ ೧೯೪೪ ರಲ್ಲಿ ಅಲ್ಲಿಯ ಶಿಕಾರಪುರದಲ್ಲಿ ಒಂದು ದೊಡ್ಡ ಸಂಗೀತ ಸಮ್ಮೇಳನ ನಡೆಯಿತು. ಅದಕ್ಕೆ ಅಲ್ಲಿಯ ಜನ 'ಹೋಳಿ ಹಂಡಾ' ಎಂದು ಕರೆಯುತ್ತಾರೆ. ಒಮ್ಮೆ ಅಲ್ಲಿ ಹಿಂದೂ-ಮುಸ್ಲೀಂ ಭೇಧ-ಭಾವ ತಲೆ ಎತ್ತಿತ್ತು. ಮುಸ್ಲಿಮರು ಹಿಂದೂ ಜನರನ್ನು, ಹಿಂದೂ ಗಾಯಕರನ್ನು ತಿರಸ್ಕಾರದಿಂದ ನೋಡುತ್ತಿದ್ದರು. ಹೀಗಾಗಿ ಆ ಸಂಗೀತ ಸಮ್ಮೇಳನದಲ್ಲಿ ಛೋಟೆ ಗುಲಾಮ ಎಂಬ ಮುಸ್ಲಿಂ ಗಾಯಕರು ತೋಡಿ ರಾಗ ಹಾಡಿ ಭಾರಿ ಪ್ರಭಾವ ಬೀರಿದರು. ಅವರ ನಂತರ ಹಾಡಲು ಯಾರು ಮುಂದೆ ಬರದಾದರು. ಅವರ ಜೊತೆಗಿದ್ದ ಶ್ರೀ ನಿವೃತ್ತಿ ಬುವಾ ಸರನಾಯಕ, ವಿನಾಯಕರಾವ್‌ಪಟವರ್ಧನ, ಕಸ್ತೂರಿಲಾಲ

ಮುಂತಾದವರು ರಾಜಗುರು ಅವರಿಗೆ ನೀವೆ ಹಾಡಬೇಕು ಎಂದು ಒತ್ತಾಯಿಸಿ ಹುರುಪು ಕೊಟ್ಟು ವೇದಿಕೆ ಹತ್ತಿಸಿದರು. ಪಂ. ರಾಜಗುರು ಅವರು ತಂಬೂರಿಯೊಂದಿಗೆ ಸ್ವರ ಹಚ್ಚಿದ ಕೂಡಲೇ ಅದ್ಭುತ ಕರತಾಡನವಾಯಿತು. ಈಗ ಅವರು ಮೈಮರೆತು ಜೀವನಪುರಿ ರಾಗವನ್ನು ಹಾಡಿದರು. ಏನು ಪ್ರೇಕ್ಷಕರ ಸಂತೋಷಕ್ಕೆ ಮಿತಿಯೇ ಇಲ್ಲ! ಆಗ ಅಲ್ಲಿಯ ಕಾರ್ಯಕರ್ತ ಪರಮಾನಂದ ಎಂಬುವರು 'ನೀವು ಹಿಂದೂ ಗಾಯಕರ ಮಾನ ಉಳಿಸಿದಿರೆಂದು' ರಾಜಗುರು ಅವರನ್ನು ಎತ್ತಿಕೊಂಡು ಕುಣಿದಾಡಿದರು.

ಶಿಕಾರಪುರದಲ್ಲಿ ಜಾನಕಿರಾಮ ಕ್ಷತ್ರಿಯೆಂಬ ಆಗರ್ಭ ಶ್ರೀಮಂತರ ಪರಿಚಯ ಪಂ. ರಾಜಗುರು ಅವರಿಗೆ ಆಗಿತ್ತು. ರಾಜಗುರು ಅವರ ಸಂಗೀತವು ಕ್ಷತ್ರಿಯವರನ್ನು ಮೋಡಿ ಮಾಡಿತ್ತು. ಆದ್ದರಿಂದ ಕ್ಷತ್ರಿಯವರು ರಾಜಗುರು ಅವರಿಗೆ ಸಕಲ ಸೌಕರ್ಯ ಒದಗಿಸಿಕೊಟ್ಟು ತಮ್ಮಲ್ಲಿಯೇ ಇಟ್ಟುಕೊಂಡರು. ಅವರ ಮಗ ಸಾಧುನಿಗೆ ಸಂಗೀತ ಪಾಠ ಹೇಳುವುದೊಂದು ನೆಪವಾಗಿತ್ತಷ್ಟೆ. ಕ್ಷತ್ರಿಯವರು ರಾಜಗುರು ಅವರಿಗೆ ಐದು ಗುಂಟೆ ಜಾಗ ಕೊಡುವೆ ಎಂದು, ಅವರು ಅಲ್ಲಿಯೇ ವಾಸವಾಗಿರಬೇಕೆಂದು ಕೇಳಿದ್ದರು. ಆದರೆ ೧೯೪೭ ರಲ್ಲಿ ಸ್ವಾತಂತ್ರ್ಯ ಹೋರಾಟದ ಪ್ರಯುಕ್ತವಾಗಿ ನಡೆದ ಹಿಂದೂ-ಮುಸ್ಲಿಂ ಗಲಾಟೆಗಳು ಎಲ್ಲರನ್ನು ನಡುಗಿಸಿದವು. ಇದರಿಂದಾಗಿ ಜಾನಕಿರಾಮ ಕ್ಷತ್ರಿಯವರು ತಮ್ಮ ಆಸ್ತಿಯನ್ನೆಲ್ಲ ಅಲ್ಲಿಯೇ ಬಿಟ್ಟು ಭಾರತದ ಲಖನೌ ನಗರಕ್ಕೆ ಓಡಿ ಹೋದರು. ಆಗ ಪಂ.ರಾಜಗುರು ಅವರು ಫ್ರಂಟಿಯರ್ ಮೇಲ ರೈಲ್ವೆಯನ್ನು ಹತ್ತಿ ಭಾರತಕ್ಕೆ ಬಂದರು.

ಪಂ. ರಾಜಗುರು ಅವರು ಸುರಕ್ಷಿತವಾಗಿ ಕರ್ನಾಟಕಕ್ಕೆ ಮರಳಿ ಬಂದ ಮೇಲೆ ಹುಬ್ಬಳ್ಳಿಯ ಮೋಹನ ಟಾಕೀಜಿನಲ್ಲಿ ಅವರ ಸಂಗೀತ ಕಛೇರಿ ನಡೆಯಿತು. ಅಲ್ಲಿ ಅವರ ಸಂಗೀತವನ್ನು ಮೆಚ್ಚಿದ ಕುಂದಗೋಳದ ನಾನಾಸಾಹೇಬ ದೇಸಾಯಿಯವರು ಪಂ. ರಾಜಗುರು ಅವರನ್ನು ತಮ್ಮೂರಿಗೆ ಕರೆದುಕೊಂಡು ಹೋದರು. ಅವರು ಪಂ. ರಾಜಗುರು ಅವರಿಂದ ಸಂಗೀತವನ್ನು ಹೇಳಿಸಿಕೊಂಡರು. ಈಗ ಪಂ.ರಾಜಗುರು ಅವರಿಗೆ ದೇಶದ ನಾನಾ ಭಾಗಗಳಿಂದ ಆಮಂತ್ರಣಗಳು ಬರತೊಡಗಿದವು. ೧೯೫೦ರಲ್ಲಿ ಧಾರವಾಡದಲ್ಲಿ ರೇಡಿಯೋ ಕೇಂದ್ರ ಪ್ರಾರಂಭವಾಯಿತು. ಪಂ. ರಾಜಗುರು ಅವರಿಗೆ ತಿಂಗಳಿಗೆ ಐದು ಕಾರ್ಯಕ್ರಮಗಳು ದೊರೆಯುತ್ತಿದ್ದವು. ಈ ಹಿನ್ನೆಲೆಯಲ್ಲಿ ಅವರು ನಾನಾಸಾಹೇಬರ ಒಪ್ಪಿಗೆ ಪಡೆದು ಧಾರವಾಡದಲ್ಲಿ ನೆಲೆಯೂರಿದರು. ಅಂದಿನಿಂದ ಧಾರವಾಡವು ಅವರ ಸಂಗೀತ ಕಾರ್ಯ ಕ್ಷೇತ್ರವಾಯಿತು.

ಯುವಕ ಪಂ. ರಾಜಗುರು ಅವರು ವಯಸ್ಸಾದಂತೆ ಮದುವೆಯ ಹಂಬಲವನ್ನು ಬೆಳೆಸಿಕೊಂಡರು. ೧೯೫೧ರಲ್ಲಿ ಬಿಜಾಪುರ ಜಿಲ್ಲೆಯ ಬೋಳೆಗಾಂವದ ಬೋಳೆಗಾಂವಮಠ ಅವರ ಮಗಳು ಮಹಾದೇವಿಯೊಂದಿಗೆ ಅವರ ಲಗ್ನವಾಯಿತು. ಶ್ರೀಮತಿ ಮಹಾದೇವಿಯವರ ಪ್ರಕೃತಿ ಬಹಳ ಸೂಕ್ಷ್ಮವಾಗಿತ್ತು. ಅವರು ರಾಜಶೇಖರ, ಹೇಮಾ ಮತ್ತು ಸರ್ವಮಂಗಳಾ ಎಂಬ ಮೂವರು ಮಕ್ಕಳನ್ನು ನೀಡಿ ೧೯೬೧ ರಲ್ಲಿ ಸ್ವರ್ಗಸ್ಥರಾದರು. ನಂತರ ಅವರು ಮಹಾದೇವಿಯವರ ತಂಗಿ ಭಾರತಿಯನ್ನು ಅದೇ ವರ್ಷ ಮದುವೆಯಾದರು. ಶ್ರೀಮತಿ ಭಾರತಿದೇವಿಯಿಂದ ರಾಜಗುರು ಅವರಿಗೆ, ಶಿವಾನಂದ, ಜಯಾ ಹಾಗೂ ನಿಜಗುಣ ಎಂಬ ಮಕ್ಕಳಾಗಿವೆ.

ಪಂ.ರಾಜಗುರು ಅವರ ಸಂಗೀತ ವೃತ್ತಿ ಅವರ ಮದುವೆಯಿಂದಾಗಿ ತೊಂದರೆಗೊಳಗಾಗಲಿಲ್ಲ. ಅವರು ಎಂದಿನಂತೆ ಆಹ್ವಾನ ಬಂದಲ್ಲಿ ಸಂಗೀತ ಕಛೇರಿ ನೀಡುತ್ತಿದ್ದರು. ೧೯೫೫ ರಲ್ಲಿ ಮಹಾರಾಷ್ಟ್ರದ ನಾಂದೇಡದಲ್ಲಿ ಒಂದು ಸಂಗೀತ ಸಮ್ಮೇಳನ ನಡೆಯಿತು. ಆ ಕಾರ್ಯಕ್ರಮಕ್ಕೆ ಅಂದಿನ ಖ್ಯಾತ ಗಾಯಕ ಶ್ರೀ ಡಿ.ವಿ. ಪಲೂಸ್ಕರರು ಬಂದಿರಲಿಲ್ಲ. ಪಂ.ಪಲೂಸ್ಕರರ ಗೈರು ಹಾಜರಿಯಲ್ಲಿ ಪಂ. ರಾಜಗುರು ಅವರು ಹಾಡಬೇಕೆಂದು ವಿನಂತಿ ಬಂತು. ಆಗ ಪಂ. ರಾಜಗುರು ಅವರು ಉಲ್ಲಾಸದಿಂದ ಹಾಡಿದರು. ಅದನ್ನು ಕೇಳಿದ ಜನ ಹುಚ್ಚೆದ್ದು ಕುಣಿದಾಡಿದರು. ಆ ಸಭೆಯಲ್ಲಿ ಉಪಸ್ಥಿತರಿದ್ದ ಮಹಾರಾಷ್ಟ್ರದ ಸಂಸ್ಕೃತಿ ಇಲಾಖೆಯ ಸಚಿವರಾದ ಶ್ರೀ ಬಿ.ಎ. ಕೇರ್ಕರರು ವೇದಿಕೆಗೆ ಬಂದು ಭಾಷಣವನ್ನು ಮಾಡಿ 'ರಾಜಗುರು ಅಂದರೆ 'ಹುಕುಮಿ ಎಕ್ಕಾ' ಇದ್ದಂತೆ. ಅವರಿಂದ ಯಾವಾಗ ಬೇಕಾದರೂ ಹಾಡಿಸಬಹುದು. ಹುಸಿ ಎಂಬುದೇ ಇಲ್ಲ. ಡಿ.ವಿ. ಪಲೂಸ್ಕರರು ಬರಲಾರದ ನಿರಾಶೆಯನ್ನು ರಾಜಗುರು ನಿವಾರಿಸಿದರು' ಎಂದು ಪ್ರಶಂಸಿಸಿದರು. ಸಂಘಟಕರು ಮೊದಲು ರಾಜಗುರು ಅವರಿಗೆ ಐದು ನೂರು ರೂಪಾಯಿ ಕೊಡಲು ಒಪ್ಪಿದ್ದರು. ಅಂದಿನ ಅವರ ಯಶಸ್ವಿ ಸಂಗೀತ ಕಾರ್ಯಕ್ರಮದಿಂದ ಬಂದ

ಏಳುಸಾವಿರ ರೂಪಾಯಿಯ ಪಾತ್ರೆಯನ್ನು ಅವರ ಮುಂದೆ ಹಿಡಿದು 'ಪಂಡಿತಜೀ ನಿಮಗೆ ಎಷ್ಟು ಬೇಕೊ ಅಷ್ಟು ಹಣವನ್ನು ತೆಗೆದುಕೊಳ್ಳಿ ಎಂದರು. ಅದಕ್ಕೆ ಪಂ. ರಾಜಗುರು ಅವರು 'ನೀವೇ ನಿಮಗೆ ತಿಳಿದಷ್ಟು ಕೊಡಿರಿ' ಎಂದರು. ಆಗ ಆ ಸಮಿತಿಯವರು ಪ. ರಾಜಗುರು ಅವರಿಗೆ ಒಂದುವರೆ ಸಾವಿರ ರೂಪಾಯಿಯ ಗೌರವ ಧನವನ್ನು ನೀಡಿದರು.

ಕನ್ನಡ ನಾಡಿನಲ್ಲಿ ಹಾಗೂ ದಕ್ಷಿಣ ಭಾರತದಲ್ಲಿ ಪ್ರಸಿದ್ಧಿ ಪಡೆದ ಪಂ. ರಾಜಗುರು ಅವರು ಈಗ ಉತ್ತರ ಭಾರತಕ್ಕೆ ನಡೆದರು. ಅವರ ಸಂಗೀತ ಕಾರ್ಯಕ್ರಮವು ೧೯೫೩ರ ಆಗಸ್ಟ್೧೫ ರಂದು ದೆಹಲಿಯ ಆಕಾಶವಾಣಿ ಕೇಂದ್ರದಿಂದ ಪ್ರಸಾರವಾಯಿತು. ಇದು ಅವರ ಮೊಟ್ಟ ಮೊದಲನೆಯ ರಾಷ್ಟ್ರೀಯ ಕಾರ್ಯಕ್ರಮವಾಗಿತ್ತು. ಅವರ ಸಂಗೀತ ಕಾರ್ಯಕ್ರಮದ ವಿಮರ್ಶೆಯು ರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಸಾರವಾಗಿ ಅವರ ಕೀರ್ತಿಯನ್ನು ಹೆಚ್ಚಿಸಿತು.

ಭಾರತದಲ್ಲಿ ಸಂಗೀತದ ದೊಡ್ಡ ಪರಂಪರೆಯೇ ಇದೆ. ಸ್ವಾತಂತ್ರ್ಯಾ ನಂತರದ ಕಾಲದಲ್ಲಿ ಈ ಪರಂಪರೆ ಪಾಕಿಸ್ತಾನದಲ್ಲೂ ಮುಂದುವರೆಯಿತು. ಲಾಹೋರಿನ ಖಲಿಫಾ ಎಂಬುವರು ಒಂದು ವಿಶಿಷ್ಟ ರೀತಿಯ ಸಂಗೀತ ಸಮ್ಮೇಳನವನ್ನು ನಡೆಸುತ್ತಿದ್ದರು. ಅಲ್ಲಿ ಏಳು ಜನ ತಬಲಾಜಿಗಳ ಕೂಡ ಗಾಯಕರು ಹಾಡಬೇಕಾಗಿತ್ತು ಅದೊಂದು ಕಸರತ್ತಿನ ಕೆಲಸವೇ ಆಗಿತ್ತು. ಅದಕ್ಕೆ ರಾಜಗುರು ಅವರು ಒಂದು ವರ್ಷ ಆಮಂತ್ರಿತರಾಗಿ ಹೋಗಿದ್ದರು. ತಾಳದ ಒಂದೊಂದು ಆವೃತ್ತಿಯನ್ನು ಒಬ್ಬರಾದ ಮೇಲೆ ಒಬ್ಬರು ನುಡಿಸುವುದು ಹಾಡುಗರು ಸರಿಯಾಗಿ ಸಮ್ ಗೆ ಬರುವುದು ಅಲ್ಲಿಯ ಕ್ರಮವಾಗಿತ್ತು. ಆಗ ಪಂ. ರಾಜಗುರು ಅವರು ಮೊದಲ ತಬಲಾಜಿಗೆ ಝುಮ್ರಾ ತಾಳ ಹಿಡಿಯಲು ಹೇಳಿದರು. ಆ ತಬಲಾಜಿ ಸಂದಿಗ್ಧತೆಗೆ ಸಿಲುಕಿ ಕಕ್ಕಾಬಿಕ್ಕಿಯಾಗಿ ನುಡಿಸತೊಡಗಿದನು. ಎರಡನೆಯ ತಬಲಾಜಿಯ ಪರಿಸ್ಥಿತಿಯೂ ಇದೇ ತೆರನಾಯಿತು. ಆಗ ತಬಲಾಜಿಗಳು ಝುಮ್ರಾ ತಾಳವನ್ನು ಬಿಟ್ಟು ಬೇರೆ ತಾಳದಲ್ಲಿ ಹಾಡಲು ವಿನಂತಿಸಿಕೊಂಡರು. ಆಗ ಪಂ. ರಾಜಗುರು ತ್ರಿತಾಳದಲ್ಲಿ ಹಾಡಿದಾಗ ಶ್ರೋತೃಗಳು ಚಪ್ಪಾಳೆಯನ್ನು ತಟ್ಟಿದ್ದೆ ತಟ್ಟಿದ್ದು. ಆಗ ಈ ಸಂಗೀತ ಸಮ್ಮೇಳನದ ಸಂಯೋಜಕ ಖಲಿಪಾ ಅವರು ಸಂತೋಷದಿಂದ ರಾಜಗುರು ಅವರ ಕೈಗೆ ಬಂಗಾರದ ಖಡಗವನ್ನು ತೊಡಿಸಿ ಅವರ ಕೊರಳಿಗೆ ನೋಟುಗಳ ಹಾರವನ್ನು ಹಾಕಿದರು. ಪಂ. ರಾಜಗುರು ಅವರು ಸಂಗೀತ ಕಛೇರಿಗಳಲ್ಲಿ ಯಶಸ್ವಿಯಾಗಲು, ಆದರಲ್ಲೂ ತಬಲಾಜಿಗಳನ್ನು ಧೈರ್ಯದಿಂದ ಎದುರಿಸಲು ಕಾರಣವೆಂದರೆ ಅದಕ್ಕೆ ಶ್ರೀ ಪಂಚಾಕ್ಷರಿ ಗವಾಯಿಗಳು ನೀಡಿದ ಗಟ್ಟಿಯಾದ ತರಬೇತಿ ಎಂದು ಹೇಳಬೇಕು.

ಮಹಾನ್‌ಸಂಗೀತಗಾರ ಪಂ.ರಾಜಗುರು ಅವರನ್ನು ಮಹಾನ್‌ಕವಿಗಳಾದ ದ.ರಾ.ಬೇಂದ್ರೆಯವರು ಅಭಿಮಾನದಿಂದ ಕಾಣುತ್ತಿದ್ದರು. ಪಂ.ರಾಜಗುರು ಅವರು ಬೇಂದ್ರೆಯಂಥಹ ಕವಿವರ್ಯರ ಸಮಾರಂಭಗಳಿಗೆ ಆಗಾಗ ಹೋಗುತ್ತಿದ್ದರು. ಒಮ್ಮೆ ಬೇಂದ್ರೆಯವರು ರಾಯಚೂರಿಗೆ ಹೊರಟಿದ್ದರು. ಪಂ.ರಾಜಗುರು ಅವರು ಗುಲ್ಬರ್ಗಾಕ್ಕೆ ಹೊರಟಿದ್ದರು. ಇಬ್ಬರು ರೈಲಿನಲ್ಲಿ ಒಟ್ಟಿಗೆ ಪ್ರಯಾಣ ಮಾಡುವ ಅವಕಾಶ ಅವರಿಗೆ ದೊರೆತ್ತಿತ್ತು. ಆ ಪ್ರಯಾಣದಲ್ಲಿ ಬೇಂದ್ರೆಯವರು 'ಒಂದು ಕ್ಷಣ ಕಂಡ ತಪ್ಪಿಗೆ ಕೊರಗೋದ ಮತ್ತು ಮರಗೋದ' ಎಂಬ ತಮ್ಮ ಭಾವಗೀತೆಯನ್ನು ತಮ್ಮದೇ ಯಾದ ಧಾಟಿಯಲ್ಲಿ ಅಂದು ತೋರಿಸಿದರು. ಅದು ಪಂ. ರಾಜಗುರು ಅವರಿಗೆ ಸರಿ ಅನಿಸಲಿಲ್ಲವಂತೆ. ಆಗ ರಾಜಗುರು ಅವರು ಅದನ್ನು ತಮ್ಮದೇ ಆದ ಧಾಟಿಯಲ್ಲಿ ಹಾಡಿ ತೋರಿಸಿದಾಗ ಕವಿ ಬೇಂದ್ರೆಯವರು ಸಂತೋಷಪಟ್ಟರು.

ಇನ್ನೊಂದು ಸಂದರ್ಭದಲ್ಲಿ ಪಂ. ರಾಜಗುರು ಅವರು ಇಂಥದೇ ಅನುಭವವನ್ನು ರಾಷ್ಟ್ರಕವಿ ಕುವೆಂಪು ಅವರೊಂದಿಗೆ ಹಂಚಿಕೊಂಡಿದ್ದಾರೆ. ರಾಜಗುರು ಅವರು ಧ್ವನಿ ಮುದ್ರಣಕ್ಕಾಗಿ ಕುವೆಂಪುರವರ ಕೆಲವು ಭಾವಗೀತೆಗಳನ್ನು ತಯಾರಿಸಿದ್ದರಂತೆ. ಒಂದು ಸಲ ಅವರು ಗ.ಸ.ಹಾಲಪ್ಪನವರೊಂದಿಗೆ ಕುವೆಂಪುರವರ ಹತ್ತಿರ ಹೋಗಿ ಈ ವಿಷಯವನ್ನು ತಿಳಿಸಿದರು. ಅದಕ್ಕೆ ಕುವೆಂಪುರವರು ಒಪ್ಪಿಗೆ ಪತ್ರವನ್ನು ನೀಡಿದರು. ಹಾಗೆ ಅದು-ಇದು ಮಾತನಾಡುತ್ತ ಕುಳಿತಂತೆಯೇ ಕುವೆಂಪುರವರು ತಮ್ಮ 'ವಿಶ್ವದ ಕೇಂದ್ರ ವೃಂದಾ ವನದಲಿ ಎಂಬ ಹಾಡನ್ನು ಅಂದು ತೋರಿಸಿದರು. ಅದು ರಾಜಗುರು ಅವರಿಗೆ ಹಾಡಿನ ಬದಲಾಗಿ ಮಂತ್ರವನ್ನು ಅಂದಂಥೆ ಕೇಳಿಸಿತು. ಆಗ ಅವರು ಉತ್ಸಾಹದಿಂದ ಅಲ್ಲಿಯೇ ಧಾಟಿ ಸಂಯೋಜನೆ ಮಾಡಿ ಆ ಹಾಡನ್ನು ಸುಶ್ರಾವ್ಯವಾಗಿ ಹಾಡಿದರು. ಅದಕ್ಕೆ ಮಹಾಕವಿ ಕುವೆಂಪು ಸಂತಸಪಟ್ಟು ತಮ್ಮ ಹಾಡುಗಳ ನಾಲ್ಕು ಪುಸ್ತಕಗಳನ್ನು ಪ್ರೀತಿಯ ಕಾಣಿಕೆಯಾಗಿ ನೀಡಿದರು.

೧೯೬೧ರಲ್ಲಿ ಗ್ವಾಲಿಯರದಲ್ಲಿ ನಡೆಯುವ ತಾನಸೇನ ಸಂಗೀತ ಉತ್ಸವದಲ್ಲಿ ಪಂ. ರಾಜಗುರು ಭಾಗವಹಿಸಿದ್ದರು. ಅವರ ಪ್ರಕಾರ ಈ ಸಮ್ಮೇಳನದಲ್ಲಿ ಸಂಗೀತಗಾರರು ಭಾಗವಹಿಸಿದೆಂದರೆ ಅದೊಂದು ಅಭಿಮಾನದ ಸಂಗತಿಯಾಗಿದೆ. ಅಲ್ಲಿ ಪಂ. ಜಸರಾಜ, ವಿಲಾಯತ್‌ಹುಸೇನಖಾನ್, ಗುಲಾಮ ಮುಸ್ತಾಪಾಖಾನ್‌ಮುಂತಾದ ಕಲಾವಿದರ ಕಛೇರಿಯಾದ ಮೇಲೆ ರಾತ್ರಿ ಹನ್ನೊಂದಕ್ಕೆ ರಾಜಗುರು ಅವರ ಸರತಿ ಬಂದಿತು. ಪಂ.ರಾಜಗುರು ಅವರು ಗ್ವಾಲಿಯರ ಘರಾಣೆಯ ಚೀಜನ್ನು ಬಹಳಷ್ಟು ಪರಿಣಾಮಕಾರಿಯಾಗಿ ನಿರೂಪಿಸಿದರು. ಅದಕ್ಕೆ ಶ್ರೋತೃಗಳೆಲ್ಲ ಸಂತಸ ಪಟ್ಟರು.

ಪಂ. ರಾಜಗುರು ಅವರು ತಮ್ಮ ಭಾರತ ಪ್ರವಾಸವನ್ನು ಸಂತೋಷದಿಂದ ಪೂರೈಸಿದರು.

ಪಂ. ರಾಜಗುರು ಅವರ ಸಂಗ್ರಹದಲ್ಲಿ ಬಹಳಷ್ಟು ಅಪರೂಪದ ರಾಗಗಳು, ಹಾಗೂ ಚೀಜಗಳು ಇದ್ದು ಇವು ಅವರಿಗೆ ಬಹಳಷ್ಟು ಸಂತಸವನ್ನು, ಪ್ರಶಂಸೆಯನ್ನು ತಂದುಕೊಟ್ಟಿವೆ. ಅವರು ೧೯೮೧ರಲ್ಲಿ ಪಾಟ್ನಾದಲ್ಲಿ ಒಂದು ಸಂಗೀತ ಕಾರ್ಯಕ್ರಮ ನೀಡಿದರು. ಆಗ ಅವರೊಂದಿಗೆ ತಬಲಾ ಸಾಥ ನೀಡಿದವರು ಖ್ಯಾತ ತಬಲಾವಾದಕ ಶ್ರೀ ಸಾಮತಾ ಪ್ರಸಾದರು. ರಾಜಗುರು ಅವರು ಮಾಲಕಂಸ ರಾಗದಲ್ಲಿ ಸುಂದರ ವದನಕೆ ಎಂಬ ಜಪ್ತಾಲ ಖ್ಯಾಲ ಹಾಡಿದರು. ಅವರು ಹೇಳುವಂತೆ ಅದರ ಸಮ್ ಬಹಳ ಕ್ಲಿಷ್ಟವಾಗಿತ್ತು. ಅದರಲ್ಲಿ ಆರನೆಯ ಮಾತ್ರೆಗೆ ಚೀಜ ಎತ್ತಿ ಹಾಡಬೇಕು. ಪಂ.ರಾಜಗುರು ಅವರು ಆ ಖ್ಯಾಲನ್ನು ನಿರಾತಂಕವಾಗಿ ಹಾಡಿ ಮುಗಿಸದ ಮೇಲೆ ಸಾಮಾತಾ ಪ್ರಸಾದರು ಎದ್ದು ನಿಂತು ಒಂದು ಚಿಕ್ಕ ಭಾಷಣವನ್ನು ಮಾಡಿ ‘ಇಂಥಹ ಅಡತಾರ ತಾಳಲಯದಲ್ಲಿ ಹಾಡುವ ಗಾಯಕರನ್ನು ನಾನು ಇದೇ ಮೊದಲು ಕಂಡಿದ್ದು, ಇದು ರಾಜಗುರು ಅವರ ತಾಳಲಯ ಸಿದ್ಧಿಗೆ ದ್ಯೋತಕವಾಗಿದೆ’ ಎಂದರು.

ಪಂ.ರಾಜಗುರು ಅವರು ಧಾರ್ಮಿಕ ಸ್ವಭಾವದವರಾಗಿದ್ದರು. ಬಾಲ್ಯದಿಂದಲೂ ಶಿವಯೋಗ ಮಂದಿರದ ಪ್ರಭಾವದಲ್ಲಿ ಬೆಳೆದ ಅವರಿಗೆ ಗುರುಗಳ ಬಗ್ಗೆ ಭಕ್ತಿ ಗೌರವ ಹೆಚ್ಚು. ಎಷ್ಟೋ ಜನ ಸ್ವಾಮಿಗಳವರ ಆಶೀರ್ವಾದ, ಕೃಪಾ-ಕಟಾಕ್ಷಗಳು ಅವರ ಪ್ರಗತಿಗೆ ಕಾರಣವಾಗಿವೆಯೆಂದು ಅವರ ನಂಬುಗೆಯಾಗಿತ್ತು. ಅಂಥ ಮಹಾತ್ಮರ ಸೇವೆ, ದರ್ಶನ ಮತ್ತು ಸಹವಾಸ ಭಾಗ್ಯ ದೊರೆತದ್ದು ಅವರ ಪುಣ್ಯವಾಗಿತ್ತು. ಪಂ. ರಾಜಗುರು ಅವರು ಮೊದಲು ಶಿವಯೋಗ ಮಂದಿರಕ್ಕೆ ಹೋದಾಗ ಹಾವೇರಿಯ ಶಿವಬಸವ ಸ್ವಾಮಿಗಳು ಅಲ್ಲಿದ್ದರು. ಅವರನ್ನು ಆಗಾಗ ರಾಜಗುರು ಅವರು ಸಂಚಾರಕ್ಕೆ ಕರೆದುಕೊಂಡು ಹೋಗುತ್ತಿದ್ದರು.

ಪಂ. ಬಸವರಾಜ ರಾಜಗುರು ಅವರು ಧಾರವಾಡದಲ್ಲಿ ನೆಲೆನಿಂತ ಮೇಲೆ ಮುರಘಾಮಠದಲ್ಲಿ ಮೇಲಿಂದ ಮೇಲೆ ಕಾರ್ಯಕ್ರಮಗಳನ್ನು ನೀಡುತ್ತಿದ್ದರು. ಆ ಮಠದ ಮೃತ್ಯುಂಜಯಪ್ಪಗಳವರು ರಾಜಗುರು ಅವರನ್ನು ಬಹಳ ಪ್ರೀತಿಯಿಂದ ನೋಡುತ್ತಿದ್ದರು. ರಾಜಗುರು ಹೇಳುತ್ತಾರೆ ‘ಈ ಸ್ವಾಮೀಜಿಯವರ ಬದುಕಿನ ಕೊನೆಯ ಅವಧಿಯು ನನ್ನ ಜೀವನದ ಅವಿಸ್ಮರಣೀಯ ಸಂದರ್ಭಗಳಲೊಂದಾಗಿದೆ’ ಎಂದು.

ಪಂ. ರಾಜಗುರು ಅವರ ಜೀವನವು ಒಂದು ಗ್ರಂಥವಾಗಿದೆ. ಅವರ ಸ್ಮೃತಿ ಸಂಪುಟದ ಪುಟಗಳು ಲೆಕ್ಕಕ್ಕೆ ಸಿಗಲಾರದ ಸಂಖ್ಯೆಯಲ್ಲಿವೆ. ಅವುಗಳಲ್ಲಿಯ ಕೆಲವನ್ನು ಅವರು ಡಾ. ಬಸವರಾಜ ಮಲಶೆಟ್ಟಿಯವರು ಸಂಪಾದಿಸಿದ ಅವರ ಅಭಿನಂದನಾ ಗ್ರಂಥ ಇಂಚರ ದಲ್ಲಿ ನೀಡಿದ್ದಾರೆ. ರಾಜಗುರು ಅವರಿಗೆ ಸಾಕಷ್ಟು ಪ್ರಶಸ್ತಿ. ಬಹುಮಾನಗಳು ಬಂದಿದ್ದರೂ ಅವರು ಇನ್ನೂ ಸಂಗೀತದ ವಿದ್ಯಾರ್ಥಿಯಾಗಿದ್ದರಿಂದ ಅವುಗಳ ಬಗ್ಗೆ ವಿಚಾರಿಸಲಿಲ್ಲ. ರಾಜಗುರು ಅವರ ಪ್ರಕಾರ ಸಂಗೀತ ಸಾಗರ ಅಪಾರವಾದುದು. ಆದರೆ ಮನುಷ್ಯನ ಸಾಧನೆಗೆ ಮಿತಿಯಿದೆ. ಹಿಮಾಲಯವನ್ನು ಇನ್ನು ಮೇಲೆ ಏರಬೇಕು ಎಂಬ ಧ್ಯೇಯವಿರಬೇಕು. ಆದರೆ ನಾವು ಹಿಮಾಲಯವನ್ನು ಏರಿ ಬಿಟ್ಟಿದ್ದೇವೆ ಎಂದರೆ ನಾವು ಪ್ರಪಾತಕ್ಕೆ ಬೀಳುತ್ತೇವೆ ಎನ್ನುತ್ತಿದ್ದರು. ಪಂ. ರಾಜಗುರು ಅವರು ಸಂಗೀತ ಲೋಕದ ವಿದ್ವಾನ್ ರಾದರು. ಪಂ. ರಾಜಗುರು ಸರಳ-ಸಂಪನ್ನರು. ಅಪರೂಪದ ನಿಗರ್ವಿಯು ಆಗಿದ್ದು ಗಮನಾರ್ಹ.

## ೧. ಪಂಡಿತ ಬಸವರಾಜ ರಾಜಗುರು ಅವರ ಸಂಗೀತ ಸಾಧನೆ

ಭಾರತ ದೇಶದ ಹಿಂದೂಸ್ತಾನಿ ಸಂಗೀತ ಕ್ಷೇತ್ರದ ಉಜ್ವಲ ವೃತ್ತಿ ಗಾಯಕರಲ್ಲಿ ದಿವಂಗತ ಪಂಡಿತ ಬಸವರಾಜ ರಾಜಗುರು ಒಬ್ಬರು. ಅವರು ಭಾರತ ಉಪಖಂಡದಲ್ಲೆಲ್ಲ ತಮ್ಮ ಶಾಸ್ತ್ರೀಯ ಸಂಗೀತವನ್ನು ಪ್ರಚಾರ ಪಡಿಸಿ ಭಾರತ ದೇಶದ ಅತ್ಯುನ್ನತವಾದ ನಾಗರಿಕ ಪ್ರಶಸ್ತಿಗಳನ್ನು ಪಡೆದು ಅಜರಾಮರರಾಗಿದ್ದಾರೆ. ಇಂಥಹ ಮಹಾನ್‌ಗಾಯಕ ಸಾಧಿಸಿದ ಸಂಗೀತ ಸಾಧನೆ, ಅದಕ್ಕಾಗಿ ಅವರು ಪಟ್ಟ ಪರಿಶ್ರಮ, ಮಾನಸಿಕ ಯಾತನೆ, ಸಾಮಾಜಿಕ ಸಂಚಲನ ಮುಂತಾದವುಗಳ ವಿವರವನ್ನಿಲ್ಲಿ ನೀಡಲಾಗಿದೆ.

ಹಿಂದಿನ ಅಧ್ಯಾಯದಲ್ಲಿ ನಿರೂಪಿಸಿದಂತೆ ಬಸವರಾಜ ರಾಜಗುರು ಅವರು ಕುಂದಗೋಳ ತಾಲೂಕಿನ ಎಲಿವಾಳದಲ್ಲಿ ಜನಿಸಿದರು. ಬಾಲ್ಯದಲ್ಲಿ ತಾಯಿಯನ್ನು ಕಳೆದುಕೊಂಡ ರಾಜಗುರು ಅವರಿಗೆ ತಂದೆ ಮಹಾಂತಸ್ವಾಮಿ ಆರೈಕೆ ಮಾಡುತ್ತ ತಮ್ಮ ಪಿಟೀಲು ವಿದ್ಯೆಯ ಜ್ಞಾನದೊಂದಿಗೆ ಮಕ್ಕಳಿಬ್ಬರಿಗೆ ಸಂಗೀತ ಶಿಕ್ಷಣವನ್ನು ನೀಡಿದರು. ಮಗ ಬಸವರಾಜನಂತೂ ಸಂಗೀತದಲ್ಲಿ ಸಾಕಷ್ಟು ಆಸಕ್ತಿಯನ್ನು ಹೊಂದಿರಲು, ತಂದೆ ಮಹಾಂತ ಸ್ವಾಮಿಗಳು ಅವನನ್ನು ಹುಬ್ಬಳ್ಳಿಯ ಮೂರುಸಾವಿರ ಮಠಕ್ಕೆ ಶಿಕ್ಷಣಕ್ಕಾಗಿ ಒಪ್ಪಿಸುತ್ತಾರೆ. ಮೂರುಸಾವಿರ ಮಠಕ್ಕೆ ಬರುತ್ತಿದ್ದ ಸಂಗೀತ ವಿದ್ವಾನ್‌ಪಂಚಾಕ್ಷರಿ ಗವಾಯಿಗಳು ಬಸವರಾಜರಿಗೆ ಸಂಗೀತವನ್ನು ಕಲಿಸಲು ಆರಂಭಿಸುತ್ತಾರೆ. ಈಗ ರಾಜಗುರು ಅವರ ಭವಿಷ್ಯವೇ ಬದಲಾಗುತ್ತದೆ.

ಈ ಘಟನೆ ನಡೆದದ್ದು ೧೯೩೦ ರಲ್ಲಿ. ಆ ವರ್ಷದ ಜೂನ ತಿಂಗಳಲ್ಲಿ ಪಂಚಾಕ್ಷರಿ ಗವಾಯಿಗಳವರು ರಾಜಗುರು ಅವರನ್ನು ತಮ್ಮ ೬೦ ಜನ ವಿದ್ಯಾರ್ಥಿಗಳೊಂದಿಗೆ ಶಿವಯೋಗ ಮಂದಿರಕ್ಕೆ ಕರೆದುಕೊಂಡು ಹೋಗುತ್ತಾರೆ. ಅಲ್ಲಿ ಅವರಿಗೆಲ್ಲ ಶಿಸ್ತು, ಸಂಯಮ, ನೀತಿ-ನಿಯಮಗಳನ್ನು, ಪೂಜಾ ಪುನಸ್ಕಾರಗಳನ್ನು ಕಲಿಸಲಾಗುತ್ತದೆ. ಬಸವರಾಜ ಗವಾಯಿಗಲು ವಿದ್ಯಾರ್ಥಿಗಳಿಗೆಲ್ಲ ಬೆಳಗಿನ ನಾಲ್ಕು ಘಂಟೆಯಿಂದ ಎಂಟು ಘಂಟೆಯವರೆಗೆ, ಮಧ್ಯಾಹ್ನ ನಾಲ್ಕು ಘಂಠೆಯಿಂದ ಸಂಜೆ ಏಳು ಘಮಟೆಯವರೆಗೆ ಸಂಗೀತಾಭ್ಯಾಸವನ್ನು ಮಾಡಿಸುತ್ತಾರೆ. ಪಂ. ರಾಜಗುರು ಅವರು ಸಂಗೀತದ ಕಛೇರಿಗಳನ್ನು ನೀಡಲು ಆರಂಭಿಸುತ್ತಾರೆ. ಅವರು ಹೈದರಾಬಾದಿನ ನಿಜಾಮರ ಮುಂದೆ ಕೊಪ್ಪಳದಲ್ಲಿ ಸಂಗೀತ ಕಛೇರಿಯನ್ನು ನೀಡಿ ಜನಮನ್ನಣೆಗೆ ಪಾತ್ರರಾಗುತ್ತಾರೆ.

ಪಂಡಿತ ರಾಜಗುರು ಅವರು ಪಂಡಿತ ಪಂಚಾಕ್ಷರಿ ಗವಾಯಿಗಳ ಶ್ರೀ ಕುಮಾರೇಶ್ವರ ನಾಟಕ ಸಂಘದಲ್ಲಿ ಅನೇಕ ಸ್ತ್ರೀ ಪಾತ್ರಗಳನ್ನು ಮಾಡುತ್ತಿದ್ದರು. ಅವರದು ಮೋಹಕವಾದ ಮುಖ ಹಾಗೂ ಮಧುರವಾದ ಧ್ವನಿ. ಆದ್ದರಿಂದ ಅವರು ವಹಿಸಿದ್ದ ಸ್ತ್ರೀ ಪಾತ್ರಗಳಿಗೆ ಕಳೆ ತುಂಬುತ್ತಿತ್ತು. ಬಸವರಾಜರು ಯೋಗಿಗಳ ಪಾತ್ರವನ್ನು ವಹಿಸುತ್ತಿದ್ದರು. 'ಸತಿ ಸುಕನ್ಯಾ', 'ಸಿದ್ಧರಾಮೇಶ್ವರ', ಹಾಗೂ 'ರಾಜಶೇಖರ ವಿಳಾಸ'ಗಳಲ್ಲಿ ಬಸವರಾಜರು ವಹಿಸಿದ ಸಿರಘನ ಪಾತ್ರ ತುಂಬಾ ಚೆನ್ನಾಗಿತ್ತು. ಅವರು ಅಲ್ಲಿ ಶಂಕರರಾಗದಲ್ಲಿ ಹಾಡುತ್ತಿದ್ದರು:

ಶಂಕರನೇ ಸಾಕ್ಷಾತ್‌ಓಂಕಾರನೇ
ಕನಸಿನೊಳಗೆ ಬಂದು
ಸೊನ್ನಲಾಪುರಕ್ಕೆ ಪೋಗೆಂದಾ

ಈ ಗೀತೆಯು ಅತ್ಯಂತ ಜನಪ್ರಿಯವಾಗಿತ್ತೆನ್ನಬೇಕು.

ಬಸವರಾಜರು ರಂಗ ಗೀತೆಗಳನ್ನು ಹಾಡುವಲ್ಲಿ ನಿಸ್ಸಿಮರು. ಅವರು ಪಂಚಾಕ್ಷರಿ ಗವಾಯಿಗಳ ನಾಟಕ ಕಂಪನಿಯಲ್ಲಿದ್ದುದರಿಂದ ಇದೆಲ್ಲ ಸಾಧ್ಯವಾಯಿತು. ಬಸವರಾಜರು ಕನ್ನಡ ರಂಗಗೀತೆಗಳಲ್ಲದೆ ಮರಾಠಿ ರಂಗಗೀತೆಗಳನ್ನು ಹಾಡುತ್ತಿದ್ದರು. ಅಂತಹ ಒಂದು ಉದಾಹರಣೆ ಈ ಕೆಳಗೆ ಇದೆ:

ದೆ ಹಾತಾ ಶರಣಗತಾ

ಚಂದ್ರಿಕಾ ಹಿ ಜಣು

ಮಿತ ಭಾಷಣಿ

ಅಂದು ಈ ಹಾಡುಗಳು ಬಹು ಜನಪ್ರಿಯವಾಗಿದ್ದವು. ಏಕೆಂದರೆ ಈ ಹಾಡುಗಳನ್ನು ಅಂದಿನ ನಾಯಕರಾದ ಪಂಡಿತ ದೀನನಾಥ ನಾರಾಯಣ ಬುವಾ ಹಾಗೂ ಕೇಶವರಾವ್‌ರು ಹಾಡುತ್ತಿದ್ದರು. ನಂತರ ಅವರು ಈ ಸಂಗೀತ ಪ್ರಕಾರವನ್ನು ಬಳಸಿಕೊಂಡು ರಾಷ್ಟ್ರೀಯ ಗಾಯಕರಾದರು. ಹಾನಗಲ್ಲ ಕುಮಾರ ಸ್ವಾಮಿಗಳ ಪ್ರೇರಣೆಯಿಂದ ಪಂಚಾಕ್ಷರಿ ಗವಾಯಿಗಳು ಆರಂಭಿಸಿದ ಶ್ರೀ ಕುಮಾರೇಶ್ವರ ನಾಟಕ ಮಂಡಳಿ ಅಂದು ಅದ್ಭುತ ಕೆಲಸವನ್ನು ಮಾಡಿತು. ಅದರಲ್ಲಿ ಪ್ರಮುಖ ನಾಯಕ ನಟ ಗಾಯಕರಾಗಿದ್ದ ರಾಜಗುರು ಅವರು ನಾಟ್ಯಗೀತೆಗಳನ್ನು ಬಳಸಿಕೊಳ್ಳುವುದರ ಮೂಲಕ ತಮ್ಮ ಹಿಂದುಸ್ತಾನಿ ಸಂಗೀತವನ್ನು ಗಟ್ಟಿ ಮಾಡಿಕೊಂಡರು.

ಎಲ್ಲ ಮಾರ್ಗ ಸಂಗೀತಕ್ಕು ದೇಶಿ ಸಂಗೀತವೇ ಬುನಾದಿಯಾಗಿದೆ. ಉದಾಹರಣೆಗೆ ಶಾಸ್ತ್ರೀಯ ಸಂಗೀತವು ಜಾನಪದ ಸಂಗೀತದ ಮೇಲೆ ನಿಂತಿದೆ. ಪ್ರಸ್ತುತ ಸಂದರ್ಭದಲ್ಲಿ ಪಂ. ರಾಜಗುರು ಅವರು ತಂದೆ ಕಲಿಸಿದ ಸಂಗೀತ ಪಾಠಗಳನ್ನು ತಮಗೆ ಸಂಸ್ಕಾರವಾಗಿ ಬಳಸಿಕೊಂಡರು. ಮುಂದೆ ಅವರು ಶ್ರೀ ವಾಮನರಾವ್‌ಮಾಸ್ತರರ ನಾಟಕ ಕಂಪನಿಯಲ್ಲಿದ್ದಾಗ ಮರಾಠಿ ಸಂಗೀತ ಪ್ರಭಾವದ ರಂಗಗೀತೆಗಳನ್ನು ಫಲಪ್ರದವಾಗಿ ಬಳಸಿಕೊಂಡರು. ತದನಂತರ ಅವರು ಗಾನಯೋಗಿ ಪಂ. ಪಂಚಾಕ್ಷರಿ ಗವಾಯಿಯವರ ಶಿಷ್ಯರಾಗಿ, ಅವರ ನಾಟಕ ಕಂಪನಿಯಲ್ಲಿ ಗಾಯಕ ನಟರಾಗಿ ಬಹಳಷ್ಟು ತಾಲೀಮು ಪಡೆದರು. ಪಂಚಾಕ್ಷರಿ ಗವಾಯಿಗಳವರು ಹಾನಗಲ್ಲ ಶ್ರೀ ಕುಮಾರ ಸ್ವಾಮಿಗಳ ಪರಮ ಶಿಷ್ಯಂದಿರಾಗಿ ಮೈಸೂರಿನಲ್ಲಿ, ನಂತರ ಉಸ್ತಾದ ವಹೀದಖಾನರ ಗರಡಿಯಲ್ಲಿ, ಅಷ್ಟೇ ಅಲ್ಲ ಗ್ವಾಲಿಯರ ಘರಾಣೆಯ ಪಂಡಿತ ನಿಲಕಂಠ ಬುವಾ (ಮಿರಜಕರ) ಅವರಿಂದ ಶಾಸ್ತ್ರೀಯ ಸಂಗೀತವನ್ನು ಕಲಿತ್ತಿದ್ದರು. ಪಂಚಾಕ್ಷರಿ ಗವಾಯಿಗಳು ಪಂ. ರಮಕೃಷ್ಣ ಬುವಾ ವಝೆ, ಶ್ರೀ ಬಾಬುರಾವ ರಾಣೆ ನಂತರ ಉಸ್ತಾದ ಇನಾಯತ್‌ಹುಸೇನ ಖಾನರ ಬಳಿ ಸಂಗೀತ ಅಧ್ಯಯನ ಮಾಡಿದ್ದರು. ಪಂಚಾಕ್ಷರಿ ಗವಾಯಿಗಳು ವಾದ್ಯ ಸಂಗೀತದಲ್ಲೂ ಪಳಗಿದವರು. ಅನೇಕರು ಹೇಳುವಂತೆ ಪಂ.ಬಸವರಾಜ ರಾಜಗುರು ಅವರು ಗಾಯನ ನೀಡುತ್ತಿದ್ದಾಗ ಪಂಚಾಕ್ಷರಿ ಗವಾಯಿಗಳೆ ತಬಲಾ ಬಾರಿಸುತ್ತಿದ್ದರು. ಪುಟ್ಟರಾಜ ಗವಾಯಿಗಳು ಹಾರ್ಮೊನಿಯಂ ಸಾಥಿ ನೀಡುತ್ತಿದ್ದರು. ಹೀಗೆ ಉಭಯಗಾನ ವಿಶಾರದರೂ, ಪಂಡಿತರೂ ಆದ ಪಂ. ಪಂಚಾಕ್ಷರಿ ಗವಾಯಿಗಳವರ ಬಳಿ ದಶಕಗಳವರೆಗೆ ಸಂಗೀತ ಸಾಧನೆ ಗೈದ ಪಂ. ರಾಜಗುರು ಅವರು ಧನ್ಯರಾಗಿದ್ದರು.

ಬಸವರಾಜ ರಾಜಗುರು ಅವರ ಸಂಗೀತ ಸಾಧನೆ ಇಷ್ಟಕ್ಕೆ ನಿಲ್ಲಲಿಲ್ಲ. ಅವರು ಹೆಚ್ಚಿನ ಸಂಗೀತ ಅಧ್ಯಯನಕ್ಕಾಗಿ ಕಿರಾಣಾ ಘರಾಣಾದ ಸುಪ್ರಸಿದ್ಧ ಗಾಯಕರಾದ ಸವಾಯಿ ಗಂಧರ್ವರಿಂದ ಸಂಗೀತದ ಸೂಕ್ಷ್ಮ ಅಂಶಗಳಾದ ಮುರ್ಕಿಮೀಂಡ ಕಿರಣಾ ಘರಾಣೆಯ ಅಂಶಗಳನ್ನು ಕಲಿತರು.

ಹಿಂದೂಸ್ತಾನಿ ಸಂಗೀತವೂ ಪ್ರಾಚೀನ ಕಾಲದ ಇತಿಹಾಸವನ್ನು ಹೊಂದಿದ್ದು ಅದಕ್ಕೆ ತನ್ನದೆಯಾದ ಹುಟ್ಟು, ಬೆಳವಣಿಗೆ ಹಾಗೂ ಆಂತರಿಕ ರಚನೆಗಳಿವೆ. ಹಿಂದೂಸ್ತಾನಿ ಸಂಗೀತವು ಪರ್ಷಿಯಾದಿಂದ ಬಂದ ಮುಸಲ್ಮಾನ ಕಲಾವಿದರ ಸೊತ್ತಾಗಿದ್ದು ಅದರಲ್ಲಿ ಮುಸ್ಲೀಂ ಒಳನೋಟಗಳಿವೆ. ಹಿಂದೂಸ್ತಾನಿ ಸಂಗೀತವು ಹಿಂದೂ ಸಂಸ್ಕೃತಿಯೊಂದಿಗೆ ಘರ್ಷಿಸಿ ಭಾರತದ ಸಂಗೀತವೇ ಆದದ್ದು ವಿಶೇಷ . ಹತ್ತನೇ ಶತಮಾನದಿಂದ ದೆಹಲಿಯನ್ನು ಆಳಿದ ಮುಸಲ್ಮಾನರು ಹಿಂದೂಸ್ತಾನಿ ಸಂಗೀತವನ್ನು ಬೆಳಸಿದರು. ಹದಿನೈದನೇ ಶತಮಾನದಿಂದ ಭಾರತವನ್ನು ಆಳಿದ ಮೊಘಲರ ಕಾಲದಲ್ಲಿ ಈ ಸಂಗೀತ ಉಚ್ಛ್ರಾಯ ಸ್ಥಿತಿಯನ್ನು ಕಂಡಿತು. ಮಧ್ಯಯುಗದ ಭಾರತದಲ್ಲಿ ಹಿಂದೂಸ್ತಾನಿ ಸಂಗೀತವನ್ನು ಬೆಳಸಿದ ತಾನಸೇ ನ ಹಾಗೂ ಅಮೀರ ಖುಶ್ರು ಅವರ ಹೆಸರನ್ನು ಕೇಳದವರಾರು?

ಹಿಂದೂಸ್ತಾನಿ ಸಂಗೀತದಲ್ಲಿ ಒಂದು ವಿಶೇಷವಾದ ರಚನಾ ಶಾಸ್ತ್ರವಿದೆ. ಅಲ್ಲಿ ಘರಾಣೆಗಳು ಬರುತ್ತವೆ. ಘರಾಣೆಗಳು ಅಂದರೆ ಸಂಗೀತ ಶೈಲಿಯ ಮನೆತನಗಳು. ಈ ಸಂಗೀತ ಮನೆತನಗಳನ್ನು ಶ್ರೇಷ್ಠ ಸಂಗೀತಗಾರರು ಕನಿಷ್ಠ ಮೂರು ತಲೆಮಾರಿನವರೆಗೆ ಬೆಳೆಸಿರುತ್ತಾರೆ. ಘರಾಣೆಗಳಲ್ಲಿ ಧ್ವನಿ ಉತ್ಪಾದನಾ ರೀತಿ, ಆಂತರಿಕ ರಚನೆ, ನಿರ್ಬಂಧ ಹಾಗೂ ಶುದ್ಧತೆ, ಬಂಧೀಶ ಮತ್ತು ಶೈಲಿ ಮುಂತಾದ ರಚನಾತ್ಮಕ ಅಂಶಗಳಿವೆ.

**ಪಂ. ಬಸವರಾಜ ರಾಜಗುರು ಅವರು ಅನುಸರಿಸಿದ ಘರಾಣೆಗಳು:**

ಉತ್ತರ ಕರ್ನಾಟಕದ ಧಾರವಾಡ ಹಾಗೂ ಗದಗಗಳು ಸಂಗೀತಕ್ಕಾಗಿ ಪ್ರಸಿದ್ಧವಾಗಿವೆ. ಈ ಎರಡು ಜಿಲ್ಲೆಗಳಲ್ಲಿ ಶಾಸ್ತ್ರೀಯ ಸಂಗೀತಗಾರರು ಹುಟ್ಟಿಕೊಂಡರು. ಹೆಸರಾಂತ ಹಿಂದುಸ್ತಾನಿ ಗಾಯಕರಾದ ಪಂ . ಮಲ್ಲಿಕಾರ್ಜುನ ಮನ್ಸೂರ, ಪಂ.ಭೀಮಸೇನ ಜೋಶಿ, ಡಾ. ಗಂಗೂಬಾಯಿ ಹಾನಗಲ್‌ಮುಂತಾದವರು ಈ ಜಿಲ್ಲೆಯವರು. ಹಳೆ ತಲೆಮಾರಿನ ಉತ್ತಮ ಗಾಯಕರಾದ ಗಾನಯೋಗಿ ಪಂಚಾಕ್ಷರಿ ಗವಾಯಿ, ಸವಾಯಿ ಗಂಧರ್ವ, ಪಂ. ಪುಟ್ಟರಾಜ ಗವಾಯಿಗಳು ಇದೇ ಭಾಗದವರು . ಇನ್ನೊರ್ವ ಖ್ಯಾತ ಗಾಯಕ ಕುಮಾರ ಗಂಧರ್ವರು ಪಕ್ಕದ ಬೆಳಗಾವಿ ಜಿಲ್ಲೆಯವರು. ಈ ಶ್ರೇಷ್ಠ ಹಿಂದೂಸ್ತಾನಿ ಸಂಗೀತ ಪರಂಪರೆಯ ಈಗಲೂ ಮುಂದುವರೆದಿದ್ದು ಅದೀಗ ಕಾರವಾರ ಜಿಲ್ಲೆಯನ್ನು ಆವರಿಸಿದೆ. ಇದೇ ಭಾಗದಲ್ಲಿಂದು ಅನೇಕ ಸಂಗೀತ ದಿಗ್ಗಜರು ಶ್ರೇಷ್ಠವಾಗಿದ್ದು ಅವರಲ್ಲಿ ಶ್ರೀಮತಿ ಶಾರದಾ ಹಾನಗಲ್, ಪಂ. ಪಂಚಾಕ್ಷರಿ ಸ್ವಾಮಿ ಮತ್ತಿಗಟ್ಟಿ, ಪಂ.ರಾಜಶೇಖರ ಮನ್ಸೂರ, ಪಂ. ಚಂದ್ರಶೇಖರ ಪುರಾಣಿಕಮಠ ಮುಂತಾದವರು ಪ್ರಮುಖರು.

**ಗ್ವಾಲಿಯರ ಘರಾಣೆ:**

ಸಂಗೀತದ ದೃಷ್ಟಿಯಿಂದ ಸಿರಿಸಂಪದವಾಗಿರುವ ಈ ಭಾಗದಲ್ಲಿ ಇಪ್ಪತ್ತನೇ ಶತಮಾನದ ಪೂರ್ವಾರ್ಧದಲ್ಲಿ ಬಡತನವಿತ್ತು. ಅಂದು ಇಲ್ಲಿ ಅಲ್ಪಸ್ವಲ್ಪ ಕರ್ನಾಟಕ ಸಂಗೀತ ಕಂಡು ಬರುತ್ತಿತ್ತು. ೧೯೩೦-೪೦ರ ಸುಮಾರಿಗೆ ಈ ಮೇಲೆ ನಮೂದಿಸಿದ ಹಿರಿಯ ಸಂಗೀತಗಾರರು ಅದೇ ಕಲಿಕೆಯ ಹಂತದಲ್ಲಿದ್ದರು. ಅದೇ ತಾನೇ ಪಂಚಾಕ್ಷರಿ ಗವಾಯಿಗಳಂತವರು ಬಸವರಾಜರಂತಹ ಶಿಷ್ಯರನ್ನು ಕಟ್ಟಿಕೊಂಡು ಹಿಂದೂಸ್ತಾನಿ ಸಂಗೀತ ಕಲಿಯುತ್ತಿದ್ದರು. ಹತ್ತಿರದ ಮಹಾರಾಷ್ಟ್ರದ ಮುಂಬೈ, ಪುಣೆಗಳು ಅವರಿಗೆ ಸಂಗೀತದ ಬೆಳಕನ್ನು ನೀಡುತ್ತಿದ್ದವು. ಅಲ್ಲಿಂದ ದೊಡ್ಡ-ದೊಡ್ಡ ಶಾಸ್ತ್ರೀಯ ಸಂಗೀತಗಾರರು ಧಾರವಾಡಕ್ಕೆ ಬಂದು ಹೋಗುತ್ತಿದ್ದರು. ಅಲ್ಲಿ ಇಲ್ಲಿ ಅವರ ಸಂಗೀತ ಕಛೇರಿಗಳು ಜರುಗುತ್ತಿದ್ದವು. ಇಲ್ಲಿ ಮೊದಲು ಪ್ರಾರಂಭವಾದ ಸಂಗೀತ ಪರಂಪರೆ ಎಂದರೆ ಗ್ವಾಲಿಯರ ಘರಾಣೆಯದು. ಗಾಯನಾಚಾರ್ಯ ಬಾಳಕೃಷ್ಣ ಬುವಾ ಈಚಲಕರಂಜಿಕರ, ಪಂ. ನೀಲಕಂಠ ಬುವಾ ಮಿರಜಕರ (ಆಲೂರಮಠ), ಪಂ. ರಾಮಕೃಷ್ಣ ಬುವಾ ಮುಂತಾದವರು ಬಂದು ಧಾರವಾಡದಲ್ಲಿ ಸಂಗೀತ ಕಛೇರಿ ನೀಡುತ್ತಿದ್ದರು.

ಇಂತಹ ಸಂಧರ್ಭಗಳನ್ನು ಬಳಸಿಕೊಂಡು ಇಲ್ಲಿಯ ಸಂಗೀತಗಾರರು ಸಂಗೀತ ತರಬೇತಿಯನ್ನು ಪಡೆಯುತ್ತಿದ್ದರು. ಈ ಎಲ್ಲ ಮಹನೀಯರು ಗ್ವಾಲಿಯರ ಘರಾಣೆಯವರಾಗಿದ್ದರು. ಪಂಡಿತ ರಾಮಕೃಷ್ಣ ಬುವಾ ವಝೆ ಹಾಗೂ ಪಂ. ಶಿವರಾಮ ಬುವಾ ವಝೆಯವರು ಬೆಳಗಾವಿಯಲ್ಲಿ ನೆಲೆ ನಿಂತಾಗ ಈ ಭಾಗದ ಸಂಗೀತಗಾರರಿಗೆ ಆದ ಹರ್ಷ ಅಷ್ಟಿಷ್ಟಲ್ಲ. ಪಂ. ಗುರುರಾವ್‌ದೇಶಪಾಂಡೆಯವರು ಈ ದಿಗ್ಗಜರ ಗರಡಿಯಲ್ಲಿಯೇ ಬೆಳೆದು ಗ್ವಾಲಿಯರ ಘರಾಣೆಯ ಸಂಗೀತ ಪರಂಪರೆಯನ್ನು ಈ ಭಾಗದಲ್ಲಿ ಪ್ರಚಾರಪಡಿಸಿದರು. ಅಂದು ಬಾಲ ನಟರಾಗಿದ್ದ ಮಲ್ಲಿಕಾರ್ಜುನ ಮನ್ಸೂರರು ಹಾಡಿನ ಕಡೆಗೆ ತೋರಿದ ಬಲವನ್ನು ಗಮನಿಸಿದ ಪಂ. ನೀಲಕಂಠ ಬುವಾ ಅವರು ಮನ್ಸೂರರನ್ನು ಮಿರಜಿಗೆ ಕರೆದುಕೊಂಡು ಹೋಗಿ ಅವರಿಗೆ ಗ್ವಾಲಿಯರ ಘರಾಣೆಯ ಸಂಗೀತವನ್ನು ಧಾರೆಯೆರೆದರು. ಮುಂದೆ ಪಾಂಡಿತ್ಯ ಪೂರ್ಣ ಗಾಯಕ ಮಲ್ಲಿಕಾರ್ಜುನ ಮನ್ಸೂರರು ಸಂಗೀತ ಸಾಮ್ರಾಟ ಅಲ್ಲಾದಿಯಾಖಾನ ಸಾಹೇಬರ ಮಗ ಉಸ್ತಾದ ಮಂಜಿಖಾನ ಸಾಹೇಬರ ಶಿಷ್ಯರಾಗಿ ಘರಾಣೆಗಳ ಘರಾಣೆಯಾದ ಜೈಪೂರ ಘರಾಣೆಯನ್ನು ಕಲಿತು ಧಾರವಾಡದಲ್ಲಿ ಆ ಘರಾಣೆಯನ್ನು ಬೆಳೆಸಿದರು. ಪಂ. ದೇಶಪಾಂಡೆಯವರ ಸಮಕಾಲೀನರಾದ ದಿ. ನಾರಾಯಣಾಚಾರ ದಂಡಾಪೂರರು ಬಾಲಕೃಷ್ಣ ಬುವಾ ಈಚಲಕರಂಜಿಕರರಿಂದ ಸಂಗೀತವನ್ನು ಕಲಿತು

ಧಾರವಾಡದಲ್ಲಿ ಧರ್ಮಾರ್ಥ ಸಂಗೀತ ಪಾಠ ಶಾಲೆಯನ್ನು ನಡೆಸಿ ಕೃತಾರ್ಥರಾದರು. ಈಗ ಅವರ ಮಗ ಶೇಷಗಿರಿ ದಂಡಾಪೂರರು ಆ ಪರಂಪರೆಯನ್ನು ಮುಂದುವರೆಸಿಕೊಂಡು ನಡೆದಿದ್ದಾರೆ. ಪಂ. ದೇಶಪಾಂಡೆಯವರ ಅಗ್ರಗಣ್ಯ ಶಿಷ್ಯಂದಿರಲ್ಲಿ ಪಂ. ನಾರಾಯಣರಾವ ಮುಜುಂದಾರ, ದಿವಂಗತ ಲೋಣಕಡೆ, ವಿನಾಯಕ ತೊರವಿ, ಲತಾ ನಾಡಿಗೇರ ಹಾಗೂ ಡಾ. ನಂದಾ ಎಂ. ಪಾಟೀಲರು ಅಗ್ರಗಣ್ಯರು. ದಿವಗಂತ ನಾರಾಯಣಾಚಾರ್ಯ ದಂಡಾಪುರರ ಶಿಷ್ಯರಲ್ಲಿ ಆರ್.ಪಿ. ಹೂಗಾರ, ಶೇಷಗಿರಿ ದಂಡಾಪುರ, ಸುಧೀಂದ್ರ ದಂಡಾಪುರರು ಪ್ರಮುಖರು. ಉತ್ತರ ಕರ್ನಾಟಕದಲ್ಲಿ ಗ್ವಾಲಿಯರ ಘರಾಣೆಯು ಪ್ರವರ್ಧಮಾನಕ್ಕೆ ಬರಲು ಕಾರಣರಾದ ಪ್ರಮುಖರಲ್ಲಿ ಪಂ. ಪಂಚಾಕ್ಷರಿ ಗವಾಯಿಗಳೊಬ್ಬರು. ಹಾನಗಲ್ಲ ಕುಮಾರ ಸ್ವಾಮಿಗಳ ಶಿಷ್ಯ ಪಂ. ಪಂಚಾಕ್ಷರಿ ಗವಾಯಿಗಳು ಗದುಗಿನಲ್ಲಿ ವೀರೇಶ್ವರ ಪುಣ್ಯಾಶ್ರಮವನ್ನು ತೆರೆದು ಸಂಗೀತ ಪರಂಪರೆಯನ್ನು ಆರಂಭಿಸಿದರು. ಗದುಗಿನ ವೀರೇಶ್ವರ ಪುಣ್ಯಾಶ್ರಮದಲ್ಲಿ ಪಂಚಾಕ್ಷರಿ ಗವಾಯಿಗಳ ಮಾರ್ಗದರ್ಶನದಲ್ಲಿ ಬೆಳೆದ, ನಾಡಿನ ಖ್ಯಾತ ಕಲಾವಿದರಲ್ಲಿ ಮೃತ್ಯುಂಜಯ ಬುವಾ, ಪಂ. ಸಿದ್ಧರಾಮಜಂಬಲದಿನ್ನಿ, ಪಂ.ಲಿಂಗರಾಜ ಬುವಾ ಎರಗುಪ್ಪಿ, ಪಂ.ಗುರುಬಸವಾಚಾರ್ಯರು ಖ್ಯಾತನಾಮರಾಗಿದ್ದಾರೆ. ಇವರಲ್ಲಿ ಪಂ. ಬಸವರಾಜ ರಾಜಗುರು ಅವರು ಅಂತರರಾಷ್ಟ್ರೀಯ ಮನ್ನಣೆಯನ್ನು ಗಳಿಸಿದ್ದಾರೆ. ಲಿಂಗೈಕ್ಯ ಪಂಚಾಕ್ಷರಿ ಗವಾಯಿಗಳ ನಂತರ ಅವರ ಶಿಷ್ಯ ಪುಟ್ಟರಾಜ ಗವಾಯಿಗಳು ಖ್ಯಾತ ಸಂಗೀತಗಾರರಾಗಿ ಅನೇಕ ಸಂಗೀತಗಾರರನ್ನು ಬೆಳೆಸಿದ್ದಾರೆ, ಅವರ ಶಿಷ್ಯಂದಿರರಲ್ಲಿ ಶ್ರೀ ಸೋಮನಾಥ ಮರಡೂರ, ಶ್ರೀ ವೆಂಕಟೇಶಕುಮಾರ, ಶ್ರೀಹನುಮಂತ ಸಿಂಗ ಹಾನಗಲ್, ಶ್ರೀ ಡಿ. ಕುಮಾರದಾಸರು ಪ್ರಮುಖರು. ದಿವಂಗತ ಪಂಚಾಕ್ಷರಿ ಗವಾಯಿಗಳ ಶಿಷ್ಯ ಪಂ. ಬಸವರಾಜ ರಾಜಗುರು ಅವರು ಧಾರವಾಡದಲ್ಲಿ ನೆಲೆ ನಿಂತು ಶ್ರೀ ಗಣಪತಿ ಭಟ್ಟ, ಶ್ರೀ ಪರಮೇಶ್ವರ ಹೆಗಡೆ, ಶ್ರೀ ಶ್ರೀಪಾದ ಹೆಗಡೆ, ಶ್ರೀ ಶಾಂತಾರಾಮ ಹೆಗಡೆ, ಶ್ರೀಮತಿ ಪೂರ್ಣಿಮಾ ಭಟ್ಟ, ಶ್ರೀಮತಿ ಸಂಗೀತಾ ಕಟ್ಟಿ (ಕುಲಕರ್ಣಿ), ನಚಿಕೇತ ಶರ್ಮಾ ಎಂಬ ಶಿಷ್ಯಂದಿರರನ್ನು ತಯಾರಿಸಿದರು. ಪಂ. ಪಂಚಾಕ್ಷರಿ ಗವಾಯಿಗಳ ಶಿಷ್ಯರಲ್ಲಿ ಅರ್ಜುನ ಸಾ ನಾಕೋಡರು ಒಬ್ಬರಾಗಿದ್ದು ಅವರ ಮನೆತನವು ಸಂಗೀತಗಾರರ ಮನೆತನವಾಗಿದೆ.

ಪಂ. ಶಂಕರ ದಿಕ್ಷಿತ ಜಂತಲಿಯವರು ಗ್ವಾಲಿಯರ ಪರಂಪರೆಯವರಾಗಿದ್ದಾರೆ. ಗಾಯನಾಚಾರ್ಯ ಬಾಲಕೃಷ್ಣ ಬುವಾ ಇಚಲಕರಂಜಿಕರ ಅವರ ಶಿಷ್ಯ ಉಮಾ ಮಹೇಶ್ವರ ಬುವಾ ಅವರು ಅವರ ಶಿಷ್ಯರಾದ ಸಹೋದರರು ಬೆಳಗಾವಿಯಲ್ಲಿ ಸಂಗೀತ ಶಾಲೆಗಳನ್ನು ತೆರೆದು ಗ್ವಾಲಿಯರ ಘರಾಣೆಯ ಕಲಿಕೆಗೆ ಸಹಕರಿಸಿದರು. ನರಗುಂದದ ಪಂ. ಸದುಬುವಾ ಹಾಗೂ ಪಂ. ದತ್ತು ಬುವಾರವರು ಮೂಲತ ಉತ್ತರ ಪ್ರದೇಶದವರಾಗಿದ್ದು ಗ್ವಾಲಿಯರ ಸಂಗೀತವನ್ನು ಕಲಿಸಿದ್ದಾರೆ.

ಹೀಗೆ ಗ್ವಾಲಿಯರ ಘರಾಣೆಯು ಹಿಂದೂಸ್ತಾನಿ ಸಂಗೀತದ ಮೂಲ ಘರಾಣೆಯಾಗಿದ್ದು ಅದು ಸರಳವು, ಜನಪ್ರಿಯವು ಆಗಿದೆ . ಈ ಘರಾಣೆಯಿಂದ ಮುಂದೆ ಅನೇಕ ಘರಾಣೆಗಳು ಹುಟ್ಟಿಕೊಂಡು ಹಿಂದೂಸ್ತಾನಿ ಸಂಗೀತ ಬೆಳೆಯಿತು.

**ಕಿರಾಣ ಘರಾಣೆ:**

ಹಿಂದುಸ್ತಾನಿ ಸಂಗೀತದ ಘರಾಣೆಗಳಲ್ಲಿ ಕಿರಾಣ ಘರಾಣೆಯು ಒಂದು. ಪಂ. ಉಸ್ತಾದ ಅಬ್ದುಲ್‌ಕರೀಂಖಾನ್‌ರು ಈ ಘರಾಣೇಯನ್ನು ಉತ್ತರ ಕರ್ನಾಟಕದಲ್ಲಿ ಪರಿಚಯಿಸಿದರು. ಅವರು ತಮ್ಮ ಸಂಚಾರಿ ಬೋಧನೆಯ ಕಾಲದಲ್ಲಿ ಹುಬ್ಬಳ್ಳಿ-ಧಾರವಾಡದಲ್ಲಿ ತಂಗುತ್ತಿದ್ದರಿಂದ, ಇಲ್ಲಿ ಅವರಿಗೆ ಅನೇಕ ಶಿಷ್ಯಂದಿರರಿದ್ದರು. ಕರೀಂಖಾನರ ಸಂಗೀತದಿಂದ ಆಕರ್ಷಿತರಾದ ಕುಂದಗೋಳದ ರಾಮರಾಯರು ಅಬ್ದುಲ್‌ಕರಿಮರ ಶಿಷ್ಯರಾಗಿ ಸವಾಯಿ ಗಂಧರ್ವರೆಂಬ ಹೆಸರಿನಲ್ಲಿ ಪ್ರಖ್ಯಾತರಾದರು. ಸವಾಯಿ ಗಂಧರ್ವರ ಪ್ರಖ್ಯಾತ ಶಿಷ್ಯರೇ ಗಂಗೂಬಾಯಿ ಹಾನಗಲ್ಲರು. ಅಂತಹ ಡಾ ಹಾನಗಲ್ಲರು ಕರ್ನಾಟಕದ ಏಕಮೇವ ಕಿರಾಣಾ ಘರಾಣದ ಗಾಯಕಿಯಾಗಿ ಜಗತ್‌ಪ್ರಸಿದ್ಧಿಯನ್ನು ಪಡೆದಿದ್ದಾರೆ. ಡಾ. ಹಾನಗಲ್ಲರಿಗೆ ದೊಡ್ಡ ಶಿಷ್ಯ ಬಳಗವೆ ಇದೆ. ಅವರ ಮಗಳು ಕೃಷ್ಣಾ ಹಾನಗಲ್ಲ, ಸುಲಭಾ ಡಂಬಳ, ನಾಗನಾಥ ಒಡೆಯರ ಅವರೆಲ್ಲ ಡಾ. ಗಂಗೂಬಾಯಿಯವರ ಶಿಷ್ಯರಾಗಿದ್ದಾರೆ.

ಕಿರಾಣಾ ಘರಾಣಾದ ಇನ್ನೊರ್ವ ಗಾಯಕರೆಂದರೆ ಡಾ. ಭೀಮಶೇನ ಜೋಷಿಯವರು. ಅವರು ಮಹಾರಾಷ್ಟ್ರದಲ್ಲಿ ಉಳಿದರು. ಅವರ ಶಿಷ್ಯ ಮಾಧವ ಗುಡಿ ಮುಂತಾದವರು ಧಾರವಾಡದಲ್ಲಿ ಉಳಿದು ಕಿರಾಣಾ ಸಂಪ್ರದಾಯವನ್ನು ಮುಂದುವರೆಸಿಕೊಂಡು ನಡೆದಿದ್ದಾರೆ. ಇದೇ ಘರಾಣೆಯ ಇತರ ಕಲಾವಿದರಲ್ಲಿ ರಾಮದುರ್ಗದ ವೆಂಕಣ್ಣ, ಕೃಷ್ಣಾಭಾಯಿ, ಪಕ್ಕೀರಪ್ಪಾ ಕುಂದಗೋಳ, ಶ್ರೀಮತಿ ದೊಡ್ಡ ಕಮಲಾಬಾಯಿ ಮುಂತಾದವರು ಪ್ರಮುಖರಾಗಿದ್ದಾರೆ. ಇದೇ ರೀತಿ ಪಂ. ಗಣಪತಿರಾವ ಗುರವ ಹಾಗೂ ಅವರ ಮಗ ಸಂಗಮೇಶ್ವರ ಗುರವ ಕಿರಾಣ ಘರಾಣದಲ್ಲಿ ಸಾಕಷ್ಟು ಬೆಳೆದಿದ್ದಾರೆ. ಬೆಳಗಾವಿಯಲ್ಲಿರುವ ಪಂ.ಎ.ವ್ಹಿ. ಕಗಲಕರ ಹಾಗೂ ಪಂ.ಆರ್.ಎನ್. ಜೋಶಿಯವರು ಅನೇಕ ಜನ ಶಿಷ್ಯಂದಿರನ್ನು ತಯಾರಿಸುತ್ತಿದ್ದಾರೆ . ಬಾಗಲಕೋಟೆಯ ಶ್ರೀಮತಿ ಪ್ಯಾರಭಾಯಿ ಬೀಳಗಿ ಹಾಗೂ ಸುಶೀಲಾಬಾಯಿ ಅಮ್ಮಿನಗಡರು ಕಿರಾಣಾ ಘರಾಣೆಯ ಅನುಯಾಯಿಗಳು.

ಪಂಡಿತ ರಾಜಗುರು ಅವರ ಹಿಂದೂಸ್ಥಾನಿ ಸಂಗೀತದ ಶಿಕ್ಷಣ ನಡೆದದ್ದು ಮುಖ್ಯವಾಗಿ ಪಂ. ಪಂಚಾಕ್ಷರಿ ಗವಾಯಿಗಳ ಹತ್ತಿರವೆ. ಅವರು ಹೇಳಿಕೊಟ್ಟ ಸ್ವರದ ಅಭ್ಯಾಸ, ರಾಗ ಬಂಧೀಶಗಳ ಅಧ್ಯಯನ, ಚೀಜುಗಳು ಸಂಗ್ರಹಣೆ ಅಪೂರ್ವವಾದುದು. ಅವರು ಪಂಚಾಕ್ಷರಿ ಗವಾಯಿಗಳ ನಾಟಕ ಕಂಪನಿಯಲ್ಲಿ ಅನೇಕ ವರ್ಷಗಳವರೆಗೆ ಹಾಡಿ ಸಂಗೀತದಲ್ಲಿ ದಕ್ಷತೆಯನ್ನು ಗಳಸಿಕೊಂಡರು. ಅಂದು ಬಹು ಜನಪ್ರಿಯವಾಗಿದ್ದ ಮರಾಠಿ ರಂಗಗೀತೆಗಳನ್ನು ಅವರು ಹಾಡುತ್ತಿದ್ದರು. ನಂತರ ಅವರು ಆಗಾಗ ಪಂಚಾಕ್ಷರಿ ಗವಾಯಿಗಳ ಹತ್ತಿರ ಬರುತ್ತಿದ್ದ ನೀಲಕಂಠ ಬುವಾರಂತವರಿಂದ ಕಲಿತದ್ದು ಬಹಳಷ್ಟಿದೆ. ಮುಂದೆ ಅವರು ಪಂಚಾಕ್ಷರಿ ಗವಾಯಿಗಳನ್ನು ಬಿಟ್ಟು ಪುಣೆ-ಮುಂಬೈಗೆ ಹೋಗಿ ನೆಲೆ ನಿಂತಾಗ, ಅನಂತರ ಧಾರವಾಡದಲ್ಲಿ ಖಾಯಂ ಆಗಿ ವಾಸಿಸತೊಡಗಿದಾಗ, ಅನೇಕ ಗುರುಗಳ ಹತ್ತಿರ ಕಲಿತ್ತಿದ್ದಾರೆ. ಅಂತಹ ಕೆಲವು ಗುರುಗಳಲ್ಲಿ ನೀಲಕಂಠಬುವಾ, ಸುರೇಶಬಾಬು ಮಾನೆ, ಗೋವಿಂದರಾವ್‌ಠೆಂಬೆ ಹಾಗೂ ವಹಿದಖಾನರು ಪ್ರಮುಖರು. ಇದರಿಂದಾಗಿ ರಾಜಗುರು ಅವರ ಹಿಂದೂಸ್ತಾನಿ ಸಂಗೀತದಲ್ಲಿ ಆದ ಒಂದು ಬದಲಾವಣೆ ಎಂದರೆ ಅವರು ಪಂಚಾಕ್ಷರಿ ಗವಾಯಿಗಳಿಂದ ಕಲಿತ ಗ್ವಾಲಿಯರ ಘರಾಣೆಯೊಂದಿಗೆ, ಕಿರಾಣ ಹಾಗೂ ಪತಿಯಾಲಾ ಘರಾಣೆಗಳ ಅನೇಕ ಉಪಯುಕ್ತ ಅಂಶಗಳನ್ನು ಕರಗತ ಮಾಡಿಕೊಂಡರು. ಈ ಎಲ್ಲ ಘರಾಣೆಗೆ ನೇರವಾದ ಪರಿಣಾಮವೆಂದರೆ ಅವರ ಸಂಗೀತ ವೈವಿಧ್ಯಮಯವಾಯ್ತು. ಅವರ ಸಂಗೀತದಲ್ಲಿ ಒಂದು ತರದ ವಝುನ ಬಂದಿತು. ನಂತರ ರಾಜಗುರು ಅವರು ದೇಶ ವಿದೇಶಗಳಲ್ಲಿ ಸಂಚಾರ ಮಾಡುತ್ತಿರುವಾಗ, ಅಲ್ಲೆಲ್ಲ ದೊರೆತ ದೂರದ ಗಾಯಕರಿಂದ ಹೊಸದನ್ನು ಕಲಿತು ತಮ್ಮ ಸಂಗೀತವನ್ನು ಶ್ರೀಮಂತಗೊಳಿಸಿಕೊಂಡರು.

## ೩. ಪಂಡಿತ ಬಸವರಾಜ ರಾಜಗುರು ಸಾಂಸ್ಕೃತಿಕ ಪರಂಪರೆ:

ಪಂ. ಬಸವರಾಜ ರಾಜಗುರು ಅವರ ನಿಧನದ ನಂತರ ಅವರ ಮನೆತನದವರು ಹಾಗೂ ಶಿಷ್ಯಬಳಗದವರು ಅವರ ಸಂಗೀತ ಪರಂಪರೆಯನ್ನು ಉಳಿಸಿಕೊಂಡು ಹೋಗಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಅವುಗಳ ವಿವರವನ್ನಿಲ್ಲಿ ನೀಡಲಾಗಿದೆ.

**ರಾಜಗುರು ಸಂಗೀತ ಸಭಾ** (ಕಾರ್ಯದಶಿ ನಿಜಗುಣ ರಾಜಗುರು)

ಆಗಸ್ಟ್೧೯೮೯ರಲ್ಲಿ ತಮ್ಮ ೭೦ನೇ ವರ್ಷದಲ್ಲಿ ಪಾದಾರ್ಪಣೆ ಮಾಡಿದ್ದ ಪಂಡಿತ ಬಸವರಾಜ ರಾಜಗುರು ಅವರನ್ನು ಸತ್ಕರಿಸಲು ಅವರ ಶಿಷ್ಯವೃಂದ ಹಾಗೂ ಅಭಿಮಾನಿಗಳೆಲ್ಲರೂ ಸೇರಿ ಒಂದು ಸನ್ಮಾನ ಸಮಿತಿಯನ್ನು ಮಾಡಿದ್ದರು. ಆ ವಿಷಯವನ್ನು ತಿಳಿದು ಪಂ. ರಾಜಗುರು ಅವರು ಈ ಸಮಿತಿ ಕೇವಲ ನನ್ನ ಸತ್ಕಾರಕ್ಕೆ ಮಾತ್ರ ಸೀಮಿತವಾಗಬಾರದು. ಜನರಲ್ಲಿ ಶಾಸ್ತ್ರೀಯ ಸಂಗೀತದ ಬಗ್ಗೆ ಹೆಚ್ಚಿನ ಆಸಕ್ತಿ ಉಂಟಾಗಬೇಕು ಮತ್ತು ನಮ್ಮಲ್ಲಿ ಅನೇಕ ಹಿರಿಯ ಕಲಾವಿದರಾಗಿದ್ದಾರೆ. ಅವರಿಗೂ ಗೌರವ ಸನ್ಮಾನ ಮಾಡುವಂತಹ ಸಮಿತಿ ಮಾಡಿರಿ ಎಂದು ಹೇಳಿದರು. ಆ ಬಗ್ಗೆ ಶ್ರೀ ಸಿ.ಬಿ. ಗುತ್ತಲ ಅವರ ನೇತೃತ್ವದಲ್ಲಿ ಶ್ರೀ ಸೋಮನಾಥ ಮರಡೂರ, ಗಣಪತಿ ಭಟ್ಟ, ಶ್ರೀಪಾದ ಹೆಗಡೆ, ಡಾ||ಹೆಚ್.ಎ.ಕಟ್ಟಿ ಶಾಂತಾರಾಮ ಹೆಗಡೆ ಸೇರಿ ಚರ್ಚಿಸಿ ರಾಜಗುರುಗಳನ್ನು ಸತ್ಕರಿಸುವ ದಿನದಂದೆ ಅವರ ಹೆಸರಿನಿಂದ ಸಂಗೀತದ ವಿಕಾಸಕ್ಕಾಗಿ ಕೆಲಸ ಮಾಡುವಂತ ಒಂದು ಸಮಿತಿಯನ್ನು ರಚಿಸಲು ನಿರ್ಧರಿಸಿದರು. ಅದರಂತೆ ೧೭ ಸಪ್ಟಂಬರ ೧೯೮೯ ರಂದು ನಡೆದ

ರಾಜಗುರುಗಳ ೭೦ನೇ ವರ್ಷದ ಭವ್ಯ ಸನ್ಮಾನ ಸಮಾರಂಭದಲ್ಲಿ ನೆರೆದ ಅಪಾರ ಸಂಗೀತಾಭಿಮಾನಿಗಳ ಸಮ್ಮುಖದಲ್ಲಿ ರಾಜಗುರು ಸಂಗೀತ ಸಭಾದ ಶುಭಾರಂಭವಾಯಿತು. ಮೊದಲಿಗೆ ಗಾನಯೋಗಿ ಪಂಚಾಕ್ಷರಿ ಗವಾಯಿಗಳ ಪುಣ್ಯ ದಿನಾಚರಣೆಯ ಸಂಗೀತ ಕಾರ್ಯಕ್ರಮ, ಹಿರಿಯ ಕಲಾವಿದರಿಗೆ ಸತ್ಕಾರ, ಯುವ ಕಲಾವಿದರಿಗೆ ಪ್ರೋತ್ಸಾಹ ಮುಂತಾದ ಕಾರ್ಯಕ್ರಮಗಳನ್ನು ಸಭಾ ೧೯೯೧ ರ ವರೆಗೂ ಮಾಡುತ್ತಿತ್ತು.

ಸಂಗೀತದೊಂದಿಗೆ ತಮ್ಮ ಜೀವನವನ್ನು ಸವಿಸಬೇಕು, ಸಂಗೀತದಲ್ಲಿಯೆ ಐಕ್ಯನಾಗಬೇಕು ಎಂಬ ಪರಮ ಗುರಿಯನ್ನು ಹೊಂದಿದ ಪಂಡಿತ ರಾಜಗುರು ಅವರು ಜುಲೈ ೨೧, ೧೯೯೧ ರಂದು ಸಂಗೀತದಲ್ಲಿ ಲೀನವಾಗಿ ಹೋದರು. ಅರ್ಧ ಶತಮಾನಕ್ಕೂ ಹೆಚ್ಚಿನ ಕಾಲ ತಮ್ಮದೇಯಾದ ವಿಶಿಷ್ಟ ಪದ್ಧತಿಯಿಂದ (ಅವರ ಪದ್ಧತಿ "ರಾಜಗುರು ಶೈಲಿ" ಎಂದು ಪ್ರಸಿದ್ಧಿ ಹೊಂದಿದೆ.) ಸಂಗೀತ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆಯನ್ನು ಸಲ್ಲಿಸಿದ ರಾಜಗುರುಗಳ ಸ್ಮರಣೆ ಮತ್ತು ಅವರು ಬೆಳೆಸಿದ ಸಂಗೀತ ಪರಂಪರೆ ನಿರಂತರವಾಗಿ ಮುಂದುವರೆಸಿಕೊಂಡು ಹೋಗುವ ಸಲುವಾಗಿ, ಅವರ ದೊಡ್ಡದಾದ ಶಿಷ್ಯವೃಂದ ರಾಜಗುರು ಸಂಗೀತ ಸಭಾಕ್ಕೆ ಹೊಸ ರೂಪವನ್ನು ಕೊಟ್ಟು ರಜಿಸ್ಟರ್ಡ ಸಂಸ್ಥೆಯನ್ನಾಗಿ ಮಾಡಿದ್ದಾರೆ. ಅದರ ವತಿಯಿಂದ ಪ್ರತಿವರ್ಷ ಪಂಢಿತ ರಾಜಗುರು ಪುಣ್ಯತಿತಿ ಸಂಗೀತೋತ್ಸವವನ್ನು ಆಚರಿಸುವುದು ಮತ್ತು ದೇಶದ ಜನಪ್ರೀಯ ಕಲಾವಿದರನ್ನು ಆಮಂತ್ರಿಸಿ ಸಂಗೀತ ಕಾರ್ಯಕ್ರಮಗಳನ್ನು ನಡೆಸುವುದು ನಡೆದಿದೆ. ಅಲ್ಲಿ ಹಿರಿಯ ಕಲಾವಿದರಿಗೆ ಗೌರವ ಸತ್ಕಾರಗಳನ್ನು ಮಾಡುವುದು ಇದೆ. ಪಂಡಿತ ರಾಜಗುರು ಹಾಗೂ ಇತರ ಶ್ರೇಷ್ಠ ಸಂಗೀತಗಾರರ ಸಂಗೀತವನ್ನು ಆಡಿಯೋ ಮತ್ತು ವಿಡಿಯೋ ಮಾಧ್ಯಮಗಳಲ್ಲಿ ಸಂಗ್ರಹಿಸಿ ಮುಂದಿನ ಯುವ ಪೀಳಿಗೆಗಾಗಿ ಕಾಯ್ದರಿಸುವದು ಒಂದು ಗುರಿಯಾಗಿದೆ. ಪ್ರತಿಭಾನ್ವಿತ ಯುವ ಕಲಾವಿದ ಕಲಾ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿ ಬಹುಮಾನಗಳನ್ನು ಪ್ರೋತ್ಸಾಹಿಸುವುದು ಇದೆ. ಪಂಡಿತ ರಾಜಗುರು ಅವರ ಹೆಸರಿನಲ್ಲಿ ಪ್ರಶಸ್ತಿಗಳನ್ನು ನೀಡುವುದು ಇದೆ. ಸಂಗೀತಾಭ್ಯಾಸಕ್ಕೆ ನೆರವಗುವ ಪುಸ್ತಕ, ಲೇಖನಗಳನ್ನು ಸಂಗ್ರಹಿಸಿ ವಾಚನಾಲಯವನ್ನು ಸ್ಥಾಪಿಸುವುದು ಇದೆ.

ರಾಜಗುರು ಸಂಗೀತ ಸಭಾದ ಮುಖ್ಯ ಉದ್ದೇಶ ಹಾಗೂ ಯೋಜನೆಗಳು ಶಾಸ್ತ್ರೀಯ ಸಂಗೀತದ ವಿಕಾಸ ಮತ್ತು ಜನರಲ್ಲಿ ಅದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನುಂಟುಮಾಡುವುದೇ ಆಗಿವೆ. ಈ ಮಹೋನ್ನತ ಕಾರ್ಯಕ್ಕೆ ಸಂಗೀತ ಪ್ರೇಮಿಗಳ ಸಹಾಯ ಸಹಕಾರ ಅವಶ್ಯವಾಗಿದೆ. ರಾಜಗುರು ಸಂಗೀತ ಸಭಾಕ್ಕೆ ಸಹಾಯ ಸಲ್ಲಿಸಿಬಯಸುವವರಿಗೆ ಹಾಗೂ ಸದಸ್ಯರಾಗಿ ಅದರ ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಇಚ್ಛಿಸುವವರಿಗೆ ಆತ್ಮೀಯ ಸ್ವಾಗತವಿದೆ.

**ಸಂಗೀತ ಅಕಾಡೆಮಿ, ಹಾಸಣಗಿ, ಜಿಲ್ಲಾ ಕಾರವಾರ**

ಕಾರವಾರ ಜಿಲ್ಲೆಯ ಯಲ್ಲಾಪೂರ ತಾಲೂಕಿನ ಹಾಸಣಗಿಗೆ ಹೋದರೆ ಅಲ್ಲಿ ಅದ್ಬುತವಾದ ಸಂಗೀತ ಅಕಾಡೆಮಿಯೊಂದು ಎದ್ದು ನಿಂತಿದೆ. ಅಲ್ಲಿಯ ಹಿಂದೂಸ್ತಾನಿ ಕಲಾವಿದ ಗಣಪತಿ ಭಟ್ಟ ಹಾಸಣಗಿಯವರು ತಮ್ಮ ಗುರುಗಳಾದ ಪಂ. ರಾಜಗುರು ಅವರ ಸ್ಮರಣಾರ್ತ ಸಂಗೀತ ಅಕಾಡೆಮಿಯನ್ನು ತೆರೆದಿದ್ದು ಹೆಮ್ಮೆಯ ಸಂಗತಿಯಾಗಿದೆ.

ಮದ್ಯ ವಯಸ್ಸಿನ ಪ್ರತಿಭಾವಂತ ಗಾಯಕ ಗಣಪತಿ ಭಟ್ಟರು ಕಾರವಾರ ಜಿಲ್ಲೆಯ ಸಂಗೀತ ಕಲಿಸುವಿಕೆಗೆ ಎಲ್ಲಿಲ್ಲದ ಪ್ರಾಶಸ್ತ್ಯ ನೀಡುತ್ತಿದ್ದಾರೆ. ಅವರ ಶಿಷ್ಯ ಬಳಗವೀಗ ಸಂಗೀತ ಕಛೇರಿಗಳನ್ನು ನೀಡುತ್ತಿದ್ದು ವಿದ್ಯಾವಿಶಾರದರಾಗಿದ್ದಾರೆ. ಈ ಸಂಗೀತ ಅಕಾಡೆಮಿಯ ಇನ್ನೊಂದು ವಿದ್ಯಾರ್ಥಿಗಳಿಗೆ ಸಂಗೀತ ಶಿಕ್ಷಣವನ್ನು ನೀಡುವುದರೊಂದಿಗೆ ಸಂಗೀತ ವಿಷಯದಲ್ಲಿ ವಿಚಾರ ಸಂಕೀರ್ಣಗಳನ್ನು, ಸಂಗೀತ ಕಛೇರಿಗಳನ್ನು, ಸ್ಪರ್ಧೆಗಳನ್ನು ನಡೆಸುತ್ತಿದೆ. ಗಣಪತಿ ಭಟ್ಟರು ಅನೇಕ ಧ್ವನಿಸುರುಳಿಗಳನ್ನು ಹೊರತಂದಿದ್ದಾರೆ. ಅವರು ಸಂಗೀತ ವಿಷಯದಲ್ಲಿ ಅನೇಕ ಲೇಖನಗಳನ್ನು ಪುಸ್ತಕಗಳನ್ನು ಪ್ರಕಟಿಸುತ್ತಿದ್ದಾರೆ. ಅಷ್ಟೆ ಅಲ್ಲ ಯುವ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ವಿದ್ಯಾರ್ಥಿವೇತನಗಳನ್ನು ನೀಡುತ್ತಿದ್ದಾರೆ.

**ರಾಜಗುರು ಸ್ಮೃತಿ ಸಂಗೀತ ಸಭಾ**

ಪಂ. ಬಸವರಾಜ ರಾಜಗುರು ಅವರ ಸಂಗೀತದ ದಿವ್ಯ ವ್ಯಕ್ತಿತ್ವಕ್ಕೆ ಅವರ ಅಪಾರ ಅಭಿಮಾನಿ ಬಂಧುಗಳು ಸ್ಥಾಪಿಸಿದ ಸಂಗೀತ ಸಂಘಟನೆಗಳು ನಿದರ್ಶನಗಳಾಗಿವೆ. ಅಂತವುಗಳಲ್ಲಿ ಅವರ ಶಿಷ್ಯ ಪರಮೇಶ್ವರ ಹೆಗಡೆಯವರು ಬೆಂಗಳೂರಿನಲ್ಲಿದ್ದ "ರಾಜಗುರುಸ್ಮೃತಿ"ಯನ್ನು ಸ್ಥಾಪಿಸಿದ್ದಾರೆ. "ರಾಜಗುರು ಸ್ಮೃತಿ" ಯೊಂದು ರಾಜಗುರು ಅವರ ಹೆಸರಿನಲ್ಲಿ ಸ್ಥಾಪಿತವಾದ ಸಾರ್ವಜನಿಕ ಸಮಗೀತ ಸಂಸ್ಥೆಯಾಗಿದೆ.

ಪಂಡಿತ ರಾಜಗುರು ಅವರ ಪರಮ ಶಿಷ್ಯರಲ್ಲೊಬ್ಬರಾದ ಪರಮೇಶ್ವರ ಹೆಗಡೆಯವರು ಈ ಸಂಸ್ಥೆಯನ್ನು ತಮ್ಮ ಗುರುಗಳ ನೆನಪಿನಲ್ಲಿ ಸಂಸ್ಥಾಪಿಸಿದ್ದಾರೆ. ಈ ಸಂಸ್ಥೆಯ ಮುಖ್ಯ ಚಟುವಟಿಕೆಗಳು ಈ ಕೆಳಗಿನಂತಿವೆ.

**ಸಂಗೀತ ಸಮಾರೋಹ:**

ಈ ಕಾರ್ಯಕ್ರಮದಡಿ ವರ್ಷಕ್ಕೊಮ್ಮೆ ಎರಡು ದಿನದ ಸಂಗೀತ ಸಮಾರೋಹ ನಡೆಯುತ್ತಿದ್ದು ಅದರಲ್ಲಿ ಆರು ಜನರ ಕಛೇರಿಗಳು ಜರುಗುತ್ತವೆ. ಸಂಗೀತಾಭಿಮಾನಿಗಳು ಈ ಎಲ್ಲ ಕಾರ್ಯಕ್ರಮಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ಪ್ರವೇಶ ಫೀ ಎಂದೆನೂ ಇಲ್ಲ. 'ರಾಜಗುರು ಸ್ಮೃತಿ' ಸಂಸ್ಥೆಯು ಸಂಗೀತ ವಿದ್ವಾಂಸರಿಂದ ವಿಚಾರ ಸಂಕೀರಣಗಳನ್ನು ಏರ್ಪಡಿಸುತ್ತದೆ. ಮುಂಬರುವ ದಿನಗಳಲ್ಲಿ ಹಿಂದೂಸ್ತಾನಿ ಸಂಗೀತದ ಪ್ರಸಾರಕ್ಕಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವದು. ಗ್ರಾಮೀಣ ಪ್ರದೇಶದಲ್ಲಿ ಸಂಗೀತ ಕಛೇರಿಗಳನ್ನು ನಡೆಸುವುದು ಹಾಗೂ ಬಡ ವಿದ್ಯಾರ್ಥಿಗಳಿಗೆ ಶಿಷ್ಯ ವೇತನವನ್ನು ನೀಡುವ ಗುರಿ ಇದೆ.

**"ಪಂಡಿತ ಬಸವರಾಜ ರಾಜಗುರು ಸುವರ್ಣ ಪದಕ"**

ಸಂಗೀತ ಅಭಿಮಾನಿಗಳಾದ ಮಾನ್ಯಶ್ರೀ ಸಿ.ಬಿ. ಗುತ್ತಲ, ಚೇರಮನ್. ಬಿ.ಎಲ್.ಡಿ.ಇ. ಅಸೋಶಿಯೆಶನ್, ಬಿಜಾಪೂರ ಅವರು ತಮ್ಮ ಪುತ್ರಿ ಹಾಗೂ ಪಂಡಿತ ರಾಜಗುರು ಅವರ ಶಿಷ್ಯೆಯಾಗಿದ್ದ ದಿ. ಶ್ರೀಮತಿ ಸವಿತಾ ಗುತ್ತಲ ಸ್ಮರಣಾರ್ಥವಾಗಿ ವಿಶ್ವವಿದ್ಯಾಲಯಕ್ಕೆ ಸಂಗೀತ ವಿಷಯದಲ್ಲಿ ಪ್ರಥಮವಾಗಿ ತೇರ್ಗಡೆಯಾಗುವ ವಿದ್ಯಾರ್ಥಿಗಳಿಗೆ ಪಂಡಿತ ಬಸವರಾಜ ರಾಜಗುರು ಸುವರ್ಣ ಪದಕವನ್ನು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಇಟ್ಟಿದ್ದಾರೆ.

**ಪಂಡಿತ ರಾಜಗುರು ಸ್ಮಾರಕಕ್ಕೆ ನಿವೇಶನ ಭರವಸೆ**

ಪಂಡಿತ ರಾಜಗುರು ಅವರು ಸ್ಮಾರಕ ನಿರ್ಮಿಸುವ ಪ್ರಸ್ತಾಪ ಬಂದಲ್ಲಿ ಸೂಕ್ತ ನಿವೇಶನ ನೀಡುವುದಾಗಿ ಜಿಲ್ಲಾಧಿಕಾರಿಗಳು ಇದರಿಂದಾಗಿ ರಾಜಗುರು ಸ್ಮಾರಕವನ್ನು ನಿರ್ಮಿಸುವ ಅಗತ್ಯವಿದೆ.

**ಪಂಡಿತ ರಾಜಗುರು ಧ್ವನಿಮುದ್ರಣಗಳು**

ಪಂಡಿತ ರಾಜಗುರು ಅವರ ಅನೇಕ ಧ್ವನಿ ಮುದ್ರಣಗಳನ್ನು, ವಿಡಿಯೋ ಚಿತ್ರಗಳನ್ನು, ಲೇಖನ ಬರಹಗಳನ್ನು ಮತ್ತು ಭಾವಚಿತ್ರಗಳನ್ನು ಸಂಗ್ರಹಿಸಿಡಲಾಗಿದೆ. ಅವುಗಳ ಬಗ್ಗೆ ಆಸಕ್ತಿ ಉಳ್ಳವರು ಪಂಡಿತ ರಾಜಗುರು ಅವರ ಪುತ್ರ ಶ್ರೀ ನಿಜಗುಣ ಅವರನ್ನು ಸಂಪರ್ಕಿಸಬಹುದು.

**ಪದ್ಮಶ್ರೀ ಪಂಡಿತ ಬಸವರಾಜ ರಾಜಗುರು ಅವರಿಗೆ ಅರ್ಪಿಸಿದ ಅಭಿನಂದನಾ ಗ್ರಂಥ "ಇಂಚರ"**

ಹಿಂದೂಸ್ತಾನಿ ಸಂಗೀತ ಪ್ರಪಂಚದಲ್ಲಿ ದೊಡ್ಡ ಹೆಸರು ಮಾಡಿದ ಪಂಡಿತ ಬಸವರಾಜ ರಾಜಗರು ಅವರು ನಮ್ಮವರು ಎನ್ನುವುದು ಹೆಮ್ಮೆಯ ಸಂಗತಿ. ಪೂಜ್ಯ ಶ್ರೀ ಹಾನಗಲ್ಲ ಕುಮಾರ ಸ್ವಾಮಿಗಳವರ ಶಿಷ್ಯ ಶ್ರೀ ಪಂಚಾಕ್ಷರಿ ಗವಾಯಿಗಳ ಶ್ರೇಷ್ಠ ಶಿಷ್ಯಂದಿರಲ್ಲಿ ಅವರ ಸಾಧನೆ ದೊಡ್ಡದು. ಅವರು ಮೊದಲಿನಿಂದಲೂ ಶ್ರೀ ಜ. ಕೊಟ್ಟುರು ಸ್ವಾಮಿ ಮಠದ ಬಗ್ಗೆ ತುಂಬಾ ಅಭಿಮಾನ ಇಟ್ಟುಕೊಂಡಿದ್ದರು. ಆದುದರಿಂದ ೧೯೮೩ ರಲ್ಲಿ ಶ್ರೀ ಮಠದಲ್ಲಿ ಪಂ.ರಾಜಗುರು ಅವರ ಷಷ್ಠಿಪೂರ್ತಿ ಸಮಾರಂಭವನ್ನು ಆಚರಿಸಿದರು. ಈ ಸಂದರ್ಭದಲ್ಲಿ ಅವರಿಗೊಂದು "ಇಂಚರ" ಎಂಬ ಅಭಿನಂದನಾ ಗ್ರಂಥವನ್ನು ಅರ್ಪಿಸಲಾಯಿತು.

ಪಂ. ರಾಜಗುರು ಅವರಿಗೆ ಅರ್ಪಿಸಿದ "ಇಂಚರ" ಅಭಿನಂದನಾ ಗ್ರಂಥದ ಸಂಪಾದಕರು ಡಾ. ಬಸವರಾಜ ಮಲಶೆಟ್ಟಿಯವರು. ಈ ಗ್ರಂಥದಲ್ಲಿ ಎರಡು ಭಾಗಗಳಿದ್ದು ಮೊದಲ ಭಾಗದಲ್ಲಿ ಪಂ. ರಾಜಗುರು ಅವರ ವ್ಯಕ್ತಿತ್ವದ ದರ್ಶನವಿದೆ. ಎರಡನೇ ಭಾಗದಲ್ಲಿ ರಾಜಗುರು ಅವರು ಪ್ರಾವಿಣ್ಯ ಪಡೆದ ಶಾಸ್ತ್ರೀಯ

***

## ಡಾ. ಬಸವರಾಜ ರಾಜಗುರು

ಬಸವರಾಜ ರಾಜಗುರು ಎಂದಾಕ್ಷಣ ಸಂಗೀತದ ಗಂಧವಿರುವವರ ಕಿವಿಯಲ್ಲಿ ಇಂಚರ ಸಂಚರಿಸತೊಡಗುವುದು. ಅವರ ಗಾಯನದ ಮಾಧುರ್ಯ ಅಂತಹದು. ಭಾರತಾದ್ಯಂತ ಬಸವರಾಜ ರಾಜಗುರು ಮೋಡಿಗೆ ಒಳಗಾಗದವರಿಲ್ಲ. ಕೊನೆಯುಸಿರಿನವರೆಗೂ ಸಂಗೀತವನ್ನೆ ಉಸಿರಾಡಿದವರು ಅವರು. ತಮ್ಮ ಸಂಗೀತ ಸೌರಭವನ್ನು ಅಮೆರಿಕೆಯಲ್ಲಿ ಬೀರುವ ಸನ್ನಾಹದಲ್ಲಿ ವೀಸಾ ತೆಗೆಯಿಸಲು ಚೆನ್ನೈಗೆ ಹೋಗಿದ್ದವರು ಬೆಂಗಳೂರಿಗೆ ಜುಲೈ ೨೧, ೧೯೯೧ರಂದು ಬಂದಿಳಿದರು. ಅಲ್ಲಿಯೂ ಶಿಷ್ಯನೊಬ್ಬನಿಗೆ ಸಂಗೀತ ಪಾಠ. "ಈಗ ರಾತ್ರಿ ಇಷ್ಟೊತ್ತು. ಈ ಹೊತ್ತಿನಲ್ಲಿ ಇಂತಿಂಥ ರಾಗ ಹಾಡುತ್ತಾರೆ" ಎಂದು ವಿವರಿಸುತ್ತಿದ್ದರು. ಹಾಡುತ್ತ ಹಾಡುತ್ತ ಸ್ವರಲೋಕದಲ್ಲಿ ಲೀನವಾದರು. ಸಂಗೀತ ಪ್ರಪಂಚ ಬಡವಾಯಿತು.

ಎಲಿವಾಳ ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕಿನ ಚಿಕ್ಕ ಗ್ರಾಮ. ಅಲ್ಲೊಂದು ಒಕ್ಕಲುತನದ ಮನೆತನ. ಈ ಮನೆತನ ಮೂಲತಃ ಕೆಳದಿ ರಾಜರ ಗುರುಗಳು. ಹಾಗಾಗಿ, ರಾಜಗುರು ಎಂಬ ಅಡ್ಡಹೆಸರು. ಕಾರಣಾಂತರಗಳಿಂಧ ಎಲಿವಾಳಕ್ಕೆ ಬಂದು ನೆಲೆಸಿದ್ದರು. ಬಸವರಾಜ ಆಗಸ್ಟ್ ೨೪, ೧೯೨೦ ರಂದು ಜನಿಸಿದ. ಮಹಾಂತಸ್ವಾಮಿ-ರಾಚವ್ವ ತಂದೆತಾಯಿ, ದೊಡ್ಡಪ್ಪ ಸಂಸ್ಕೃತ ವಿದ್ವಾಂಸರು, ಜ್ಯೋತಿಷಿಗಳು. ತಂದೆಗೆ ಸಂಗೀತವೆಂದರೆ ಪಂಚಪ್ರಾಣ. ತಂಜಾವೂರಿಗೆ ಹೋಗಿ ಕರ್ನಾಟಕ ಸಂಗೀತ ಕಲಿತು ಬಂದಿದ್ದರು. ಪಿಟೀಲುಕ ಚೆನ್ನಾಗಿ ನುಡಿಸುತ್ತಿದ್ದರು. ಚಿಕ್ಕಪ್ಪ ಚನ್ನಬಸವಸ್ವಾಮಿ ಬಯಲಾಟ ಪ್ರವ ಈಣ. ಬಯಲಾಟ ಪದಗಳನ್ನು ಇಂಪಾಗಿ ಹಾಡುತ್ತಿದ್ದುದಲ್ಲದೆ ಹಾರ್ಮೋನಿಯಂ ನುಡಿಸುತ್ತಿದ್ದರು. ಬಸವರಾಜನಿಗೆ ಬುದ್ಧಿ ತಿಳಿದಾಗಿನಿಂದಲೂ ಸಂಗೀತದ್ದೇ ಹುಚ್ಚು.

ಬಸವರಾಜ ಆರು ವರ್ಷದವನಿದ್ದಾಗ ತಾಯಿ ತೀರಿಕೊಂಡಳು. ತಂದೆಯೆ ತಾಯಿಯೂ ಆದರು. ಏಳನೆಯ ವರ್ಷಕ್ಕೆ ತಂದೆಯಿಂದ ಸಂಗೀತಪಾಠ ಆರಂಭ. "ಲಂಬೋದರ ಲಕುಮಿಕರ" ಕೃತಿಯಿಂದ ಶ್ರೀಗಣೇಶ. ಸುಮಾರು ಎರಡು ವರ್ಷ ಸರಳೆ, ಜಂಟಿ,ವರ್ಣ, ಕೀರ್ತನೆ ಅಭ್ಯಾಸ ಮಾಡಿಸಿದರು.

ಆಗಿನ್ನೂ ಬಸವರಾಜನಿಗೆ ಒಂಬತ್ತು ವರ್ಷಖ. ಎಲಿವಾಳದಲ್ಲಿ ಶನಿಪ್ರಭಾವ ನಾಟಕ ಹಚ್ಚಿದ್ದರು. ನಾಟಕ ಕಲಿಸಲು ಪರ ಊರಿನ ಮಾಸ್ತರ ಬಂದಿದ್ದರು. ಹೊಡೆದುಬಡಿದು ಕಲಿಸಿದರೂ ಪಾತ್ರ ಮಾಡುವ ಹುಡುಗರಿಗೆ ಪದ ಹಾಡಲು ಬರುತ್ತಿರಲಿಲ್ಲ. ತಾಲೀಮು ಮನೆಯೊಳಗೆ ಬೇರೆ

ಯಾರನ್ನೂ ಬಿಡುತ್ತಿರಲಿಲ್ಲ. ಬಸವರಾಜ ಜಾಲಿ ಬಡ್ಡೆಯ ಮೇಲೆ ಪೀಪಾಯಿ ಇಟ್ಟು ಅದರ ಮೇಲೆ ಹತ್ತಿ ಕಿಡಕಿಯಲ್ಲಿ ಇಣಿಕಿಕ್ಕಿ ಕೇಳುತ್ತ ಒಂದೆರಡು ದಿನಗಳಲ್ಲಿಯೆ ಅವೆಲ್ಲ ಪದಗಳನ್ನು ಸರಾಗವಾಗಿ ಹಾಡಲು ಕಲಿತ. ಹಾರ್ಮೋನಿಯಂ ಜೊತೆಗೆ ಹಾಡುವಾಸೆ. ಇವನು ಕಿಡಕಿಯಲ್ಲಿ ಇಣುಕುವುದನ್ನು ಕಂಡು ನಾಟಕ ಮಾಸ್ತರರು ಕಿಡಕಿ ಮುಚ್ಚಿಸಿದರು. ಇದರಿಂದ ಬಸವರಾಜನ ಕೋಪ ಬುಸ್ಸೆಂದಿತು. ಒಂದು ದಿನ ಮಧ್ಯಾಹ್ನ ಎಲ್ಲರೂ ಮಲಗಿರುವಾಗ ಅದ್ಹೇಗೋ ಒಳಗೆ ಹೋಗಿ ಚಾಕುವಿನಿಂದ ತಬಲಾ, ಡಗ್ಗಾ ತೂತು ಕೊರೆದು ಹಾರ್ಮೋನಿಯಂ ಪಟ್ಟಿ ಕಿತ್ತೆಸೆದು ಓಟ ಕಿತ್ತುವುದರಲ್ಲಿದ್ದ. ಮಾಸ್ತರರಿಗೆ ಎಚ್ಚರವಾಯಿತು. ಹಿಡಿದು ಎರಡು ಬಾರಿಸಿದರು. ಅಭಿಮಾನಧನರಾದ ಬಸವರಾಜನ ತಂದೆಗೆ ನಖಶಿಖಾಂತ ಕೋಪ. “ಏ ಮಾಸ್ತರ, ನಿನಗೆ ಲುಕ್ಸಾನ ಆಗಿದ್ದರೆ ಹೊಸ ತಬಲಾ, ಡಗ್ಗಾ ಮಾಡಿಸಿಕೊಡುತ್ತಿದ್ದೆ. ನಮ್ಮ ಹುಡುಗನನ್ನು ಏಕೆ ಹೊಡೆದೆ”” ಎಂದು ಗದರಿಸಿದರು. ಮಾಸ್ತರರು ‘ನಿಮ್ಮ ದಮ್ಮಯ್ಯ, ತಪ್ಪಾಯಿತು, ಕ್ಷಮಿಸಿರಿ” ಎಂದು ಬೇಡಿಕೊಂಡರು.

ಮಹಾಂತಸ್ವಾಮಿ ಮಗನತ್ತ ಹೊರಳಿ “ನಿನಗೆ ಸಂಗೀತ ಕಲಿಯುವ ಹುಚ್ಚಿದ್ದರೆ ಇಂಥ ಕ್ಷುಲ್ಲಕ ನಾಟಕ ಮಾಸ್ತರರಲ್ಲಿ ಏಕೆ, ದೊಡ್ಡ ನಾಟಕ ಕಂಪನಿಯಲ್ಲಿಡುವೆ” ಎಂದರು. ಅದೇ ಸುಮಾರಿಗೆ ಅವರ ಬಾಲ್ಯಸ್ನೇಹಿತ ವಾಮನರಾವ ಮಾಸ್ತರರ ‘ವಿಶ್ವ ಗುಣಾದರ್ಶ ನಾಟಕ ಮಂಡಳಿ” ಹುಬ್ಬಳ್ಳಿಯಲ್ಲಿ ಕ್ಯಾಂಪ್ ಮಾಡಿತ್ತು. ಕರೆದುಕೊಂಡು ಹೋಗಿ ಮಗನನ್ನು ಸೇರಿಸಿಬಂದರು. ಬಸವರಾಜ ಬಾಲನಟನಾಗಿ ಬಾಲಕೃಷ್ಣ, ದಾಸಿ ಮುಂತಾದ ಪಾತ್ರಗಳಲ್ಲಿ ಮಿಂಚಿದ. ಕಂಚಿನ ಕಂಠ ಬೇರೆ. ಸ್ವತಃ ವಾಮನರಾವ ಮಾಸ್ತರರು ನಾಟಕದ ಹಾಡುಗಳನ್ನು ಅಭ್ಯಾಸ ಮಾಡಿಸುತ್ತಿದ್ದರು. ಹುಬ್ಬಳ್ಳಿ, ಧಾರವಡ, ಬೆಳಗಾವಿ, ಹೊಸಪೇಟೆ, ಬಳ್ಳಾರಿ, ಗದಗ, ಹರಿಹರ, ದಾವಣಗೆರೆ ಮುಂತಾದ ಊರುಗಳಿಗೆ ನಾಟಕ ಕಂಪನಿಯೊಂದಿಗೆ ಸುತ್ತಾಟ, ಒಮ್ಮೆ ಬಟ್ಟೆಗೆ ಸಾಬೂನು ಹಚ್ಚುತ್ತ “ಬಾಜಿರಾವ ಪೇಶ್ವೆ” ನಾಟಕದ “ಕೊಟ್ಟ ಕಾಲಕೆ ದೇವರು ನಿನಗೆ, ಕೆಟ್ಟು ಕೃತಿಯ ಮಾಡಲು ಬೇಡ” ಎಂಬ ಹಾಡು ಹೇಳುತ್ತಿದ್ದ. ವಾಮನರಾವ ಮಾಸ್ತರ ಹಿಂದೆ ಬಂದು ನಿಂತುದರ ಪರಿವೆಯೆಇಲ್ಲ. ಉಳಿದ ಹುಡುಗರು ತಿವಿದು ಎಚ್ಚರಿಸಿದಾಗಲೆ ತಿಳಿದದ್ದು. ಬಸವರಾಜನಿಗೆ ಗಾಬರಿ. ಆದರೆ, ಮಾಸ್ತರರು “ಇವನ ಹಾಂಗ ಹಯಾಡಿರಿ, ನೋಡೂಣು” ಎಂದು ಮೆಚ್ಚುಗೆ ಸೂಸಿ ಹೊರಟುಹೋದರು. ನಾಟಕ ಕಂಪನಿ ಸೇರಿ ಒಂದು ವರ್ಷವಾಗಿರಬಹುದು. ತಂದೆ ಮಹಾಂತಸ್ವಾಮಿ ಪ್ಲೇಗಿಗೆ ತುತ್ತಾದರು. ದಿಕ್ಕು ತೋಚದಾಯಿತು. ಆಗ ನೆರವಿತ್ತವರು ಕೆಳದಿ ಸಂಸ್ಥಾನ ಮಠಾಧಿಪತಿಗಳಾಗಿದ್ದ ಶ್ರೀ ರೇವಣಸಿದ್ಧ ಶಿವಾಚಾರ್ಯರು. ಅವರು ಬಸವರಾಜನ ದೊಡ್ಡಪ್ಪನ ಮಗ. ಮುಂದೆ ಬಸವರಾಜನನ್ನು ಮಠಕ್ಕೆ ಮರಿ ಮಾಡಿಕೊಳ್ಳುವಾಸೆ ಅವರಿಗದ್ದಂತಿತ್ತು. ಆದುದರಿಂದ, ನಾಟಕ ಕಂಪನಿ ಬಿಡಿಸಿ ಹುಬ್ಬಳ್ಳಿಯ ಮೂರುಸಾವಿರ ಮಠದ ಸಂಸ್ಕೃತ ಪಾಠಶಾಲೆ ಸೇರಿಸಿದರು. ಒಂದು ದಿನ ಬೇರೆ ಊರಿಗೆ ಹೊರಟಿದ್ದ ಪಂಚಾಕ್ಷರಿ ಗವಾಯಿಗಳು ಬಸ್ ತಪ್ಪಿ ಮೂರುಸಾವಿರ ಮಠಕ್ಕೆ ಬಂದರು. ಗುರುಸಿದ್ಧ ಸ್ವಾಮಿಗಳು “ಈ ಹುಡುಗ ಛಲೋ ಹಾಡತಾನ. ನಿಮ್ಮ ಸಂಗಡ ಕರಕೊಂಡು ಹೋಗಿರಿ” ಎಂದು ಶಿಫಾರಸ್ಸು ಮಾಡಿದರು. ಪಂಚಾಕ್ಷರಿ ಗವಾಯಿಗಳು “ಮಗೂ, ಒಂದು ಹಾಡ ಹೇಳಪಾ” ಅಂದರು. ಬಸವರಾಜ “ವೀರ ಅಭಿಮನ್ಯು” ನಾಟಕದ “ಭಕ್ತ ಜೀವನ ರಾಮಾ ಸುಜನ ಜೀವನ” ಎಂಬ ಪದ ಹಾಡಿದ. ಅಂಧರಾದ ಪಂಚಾಕ್ಷರಿ ಗವಾಯಿಗಳು ಮಸವರಾಜನನ್ನು ಕರೆದು ಮೈದಡವಿ “ಎಷ್ಟು ಛಂದ ಗಿರಡಿ ಹೊರಳಸತಿಯಲ್ಲೊ! ಎಲ್ಲಿ ನೋಡೋಣ, ಇನ್ನೊಂದು ಹಾಡು” ಎಂದರು. ಬಸವರಾಜ ಅದೇ ನಾಟಕದಕ “ಕರುಣ ಸಾಗರಾ ಪ್ರಭು ಪರಮಾತ್ಮಾ” ಹಾಡಿದ. ಪಂಚಾಕ್ಷರಿ ಗವಾಯಿಗಳು ಗುರುಸಿದ್ದ ಸ್ವಾಮಿಗಳನ್ನುದ್ದೇಶಿಸಿಕ “ಬುದ್ಧೀ, ನಮಗ ಹುಡುಗ ಒಪ್ಪಿಗೆ ಆಗ್ಯಾನ. ಇಂದೇ ಕರೆದೊಯ್ಯುವೆ” ಎಂದರು ಬಸವರಾಜನ ಅದೃಷ್ಟ ತೆರೆಯಿತು . ಇದು ನಡೆದದ್ದು ೧೯೩೦ ಜೂನ್ ತಿಂಗಳಲ್ಲಿ.

ಬಸವರಾಜನು ಪಂಚಾಕ್ಷರಿ ಗವಾಯಿಗಳ ಗಿಳಿವಿಂಡು ಸೇರಿದ. ಬೆಳಿಗ್ಗೆ ನಾಲ್ಕರಿಂದ ಎಂಟರವರೆಗೆ ಸಂಗೀತಪಾಠ. ಆಮೇಲೆ ಸ್ನಾನ, ಪೂಜನೆ, ಊಟ, ವಿಶ್ರಾಂತಿ. ಸಂಜೆ ನಾಲ್ಕರಿಂದ ಏಳರವರೆಗೆ ಪುನಃ ಸಂಗೀತಾಭ್ಯಾಸ. ಉಳಿದ ಸಮಯದಲ್ಲಿ ಕನ್ನಡ, ಸಂಸ್ಕೃತ ಕಾವ್ಯ, ಪುರಾಣಗಳ ಅಭ್ಯಾಸ. ದಣಿವರಿಯದ ಗುರು, ದಣಿವರಿಯದ ಶಿಷ್ಯ. ಕೆಲವು ವರ್ಷ ಶಿವಯೋಗಮಂದಿರದಲ್ಲಿ, ಆಮೇಲೆ ಸಂಚಾರಿ ಸಂಗೀತಶಾಲೆಯೊಂದಿಗೆ ಕರ್ನಾಟಕ ತುಂಬೆಲ್ಲ ಸುತ್ತಾಟ. ಬಸವರಾಜ ಏಕಪಾಠಿ. ಪಂಚಾಕ್ಷರಿ ಗವಾಯಿಗಳು ಅಬ್ದುಲ್ ಕರೀಂಖಾನ, ಅಖ್ತರಬಾಯಿ, ನಿಸ್ಸಾರ ಹುಸೇನಖಾನ, ಫೈಯಾಜಖಾನ ಮೊದಲಾದವರ ಗ್ರಾಮೊಫೋನ ಧ್ವನಿಮುದ್ರಿಕೆಗಳನ್ನು ತರಿಸುತ್ತಿದ್ದರು. ಅವುಗಳ ಉಸ್ತುವಾರಿಯನ್ನು ಬಸವರಾಜನಿಗೆ ಒಪ್ಪಿಸಿದ್ದರು. ಅವರೆಲ್ಲ ಬೇರೆ ಬೇರೆ ಶೈಲಿಯ ಗಾಯಕರಾಗಿದ್ದರೂ ಅವರ ಧ್ವನಿಮುದ್ರಿಕೆಕ ಕೇಳಿ

ತದ್ರೂಪ ಹಾಡುತ್ತಿದ್ದ. ಅಂಥ ಗ್ರಹಣಶಕ್ತಿ ಬಸವರಾಜನದು. ಹನ್ನೊಂದುವರ್ಷ ಕರ್ನಾಟಕ ಹಿಂದುಸ್ತಾನಿ ಪದ್ಧತಿಗಳೆರಡರಲ್ಲೂ ಬಸವರಾಜ ಪಂಚಾಕ್ಷರಿ ಗವಾಯಿಗಳ ಗರಡಿಯಲ್ಲಿ ಪಳಗಿದ.

ಪಂಚಾಕ್ಷರಿ ಗವಾಯಿಗಳು ತಮ್ಮ ಶಿಷ್ಯನ ಸಾಧನೆ ಪ್ರದರ್ಶಿಸಲು ಅವಕಾಶಕ್ಕಾಗಿ ಕಾಯ್ದಿದ್ದರು. ೧೯೩೬ರಲ್ಲಿ ಹಂಪೆಯಲ್ಲಿ ವಿಜಯನಗರ ಸಾಮ್ರಾಜ್ಯ ಸಂಸ್ಥಾಪನೆಯ ಷಡಶತಮಾನೋತ್ಸವ. ಹದಿನೈದು ಸಾವಿರ ಶ್ರೋತೃಗಳು, ತಬಲಾ ಸಾಥ ಸ್ವತಃ ಪಂಚಾಕ್ಷರಿ ಗವಾಯಿಗಳವರದು. ಹಾರ್ಮೋನಿಯಂ ಸಾಥ ಪುಟ್ಟರಾಜ ಗವಾಯಿಗಳದು. ಅಂದಮೇಲೆ ಕೇಳಬೇಕೆ? ಕರ್ಣರಸಾಯನ. ಬಸವರಾಜ ರಾಜಗುರು ಬಾಗೇಶ್ರೀ ರಾಗ ಹಾಡಿದರು. ನಂತರ ನಿಜಗುಣ ಶಿವಯೋಗಿಗಳ “ನೋಡಲಾಗದೆ ದೇವಾ” ಹಾಡಿದರು. ಬೃಹತ್ ಶ್ರೋತೃಸಮೂಹ ಚಪ್ಪಾಳೆ ಸುರಿಸಿತು. ಸಂಘಟಕರು ಒಂದು ಬಂಗಾರದ ಉಂಗುರ, ಐದು ರೂಪಾಯಿ ನೀಡಿದರು. ಅಂದು ಅದು ದೊಡ್ಡ ಮೊತ್ತ. ಬಸವರಾಜರಿಗೆ ಆಗ ತಾನೆ ಹದಿನಾರು ವರ್ಷ. ಮೈಸೂರು ಆಸ್ಥಾನ ವಿದ್ವಾನ್ ಚಿಕ್ಕರಾಮರಾಯರು ವೇದಿಕೆಗೆ ಬಂದು ಬೆನ್ನು ಚಪ್ಪರಿಸಿ ‘ಗವಾಯಿಗಳೆ, ಒಳ್ಳೆಯ ಶಿಷ್ಯರತ್ನವನ್ನು ಸಂಪಾದಿಸಿದ್ದೀರಿ’ ಎಂದು ಹೊಗಳಿದರು.

೧೯೩೮ರಲ್ಲಿ ಮುಂಬಯಿ ಆಕಾಶವಾಣಿಯಲ್ಲಿ ಪ್ರಥಮ ಕಾರ್ಯಕ್ರಮ. ಹದಿನೈದು ನಿಮಿಷಕ್ಕೊಂದರಂತೆ ಎರಡು ರಾಗಗಳು, ಬೆಳಿಗ್ಗೆ ಬಿಲಾವಗಲ, ರಾತ್ರಿ ಗೌಡಮಲ್ಹಾರ. ಸುತ್ತೆಲ್ಲ ಖ್ಯಾತಿ ಪಸರಿಸಿತು. ೧೯೩೮-೪೧ರ ಮಧ್ಯೆ ಬಸವರಾಜ ರಾಜಗುರುಗಳ ಹಲವಾರು ಧ್ವನಿಮುದ್ರಿಕೆಗಳು ಹೊರಬಂದವು: ಶ್ಯಾಮ ಕಲ್ಯಾಣ, ದೇಸಿ, ಮಾಲಕಂಸ, ಮೇಘ, ಚಾಂದನಿ ಕೇದಾರ, ಹಂಸಧ್ವನಿ, ೧೨ ವಚನಗಳು: ಪರಚಿಂತೆ ಎಮಗೆ ಏಕೆ ಅಯ್ಯಾ, ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯಾ ತಂದೆ, ವಚನದಲ್ಲಿ ನಾಮಾಮೃತ ತುಂಬಿ, ಜಗವ ಸುತ್ತಿಪ್ಪುದು ನಿನ್ನ ಮಾಯೆ, ಮಡಕೆಯ ಮಾಡುವರೆ ಮಣ್ಣೆ ಮೊದಲು, ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ ಇತ್ಯದಿ. ಅವು ಎಷ್ಟು ಜನಪ್ರಿಯವಾದವೆಂದರೆ ಹಳ್ಳಿಹಳ್ಳಿಯಲ್ಲಿ ಎಲ್ಲರ ನಾಲಗೆಯ ಮೇಲೆ ಅವುಗಳೇ. ವಚನಗಳನ್ನು ರಾಗಾಧಾರಿತ ಮಟ್ಟುಗಳಲ್ಲಿ ಮೊದಲು ಸಂಯೋಜಿಸಿದವರು ಗುರು ಪಂಚಾಕ್ಷರಿ ಗವಾಯಿಗಳು. ವಚನಗಳ ಮೊದಲ ಗಾನಮುದ್ರಿಕೆಗಳು ಹೊರಬಂದುದು ಬಸವರಾಜ ರಾಜಗುರು ಅವರವು. ವಚನಗಾಯನವನ್ನು ಜನಪ್ರಿಯಗೊಳಿಸುವಲ್ಲಿ ಬಸವರಾಜ ರಾಜಗುರು ಅವರ ಪಾತ್ರ ಮಹತ್ವದ್ದು.

ಬಸವರಾಜ ರಾಜಗುರು ಅವರಿಗೆ ಈಗ ಭಾರತದ್ಯಂತ ಸುತ್ತಬೇಕು. ಖ್ಯಾತಿ ಪಡೆಯಬೇಕೆಂಬ ಅದಮ್ಯ ಬಯಕೆ. ೧೯೪೧ರಲ್ಲಿ ಗುರು ಪಂಚಾಕ್ಷರಿ ಗವಾಯಿಗಳ ಆಶೀರ್ವಾದ ಪಡೆದು ಹೊರಟದ್ದೆ. ಹುಲಿ ಗವಿ ಬಿಟ್ಟು ವಿಶಾಲ ಅರಣ್ಯಕ್ಕೆ ಬಂದಂತಾಯಿತು. ಸೀದಾ ಮುಂಬಯಿಗೆಕ ಬಂದರು. ಕಾರ್ಯಕ್ರಮ ನೀಡುವುದು, ಇನ್ನೂ ಕಲಿಯುವುದು ಅವರ ವ್ರತ. ಎರಡು ವರ್ಷ ಇದೇ ದಿನಚರಿ. ಮುಂಬಯಿಯಲ್ಲಿ ಸವಾಯಿ ಗಂಧರ್ವರ ಸಾಹಚರ್ಯ. ಕೆಲಕಾಲ ಒಂದೇ ಕೋಣೆಯಲ್ಲಿ ವಾಸ. ಅವರಿಂದಲೂ ಕಲಿಕೆ. ಸವಾಯಿ ಗಂಧರ್ವರಿಗೆ ಅರ್ಧಾಂಗವಾಯು ಬಡಿದು ಮುಂಬಯಿ ಬಿಡುವಗ ಸುರೇಶಬಾಬು ಮಾನೆ ಅವರಲ್ಲಿ ಹೀಗೆ ಆಗ್ರಹ: “ಈ ಹುಡುಗನ ಮೇಲೆ ನಿಮ್ಮ ಸಂಪೂರ್ಣ ಲಕ್ಷ್ಯವಿರಲಿ”. ೧೯೪೩ರಲ್ಲಿ ಬಸವರಾಜ ರಾಜಗುರು ನಾಗಪುರದ ಅಖಿಲ ಭಾರತ ಸಂಗೀತ ಸಮ್ಮೇಳನದಲ್ಲಿ ಕಚೇರಿ ನೀಡಿದರು. ಅಲ್ಲಿಂದ ಅವರ ಸಂಗೀತ ಯಶೋಯಾತ್ರೆ ಆರಂಭಗೊಂಡಿತು. ರಾಜಗುರು ಹಾಡದ ಸಮ್ಮೇಳನಗಳಿಲ್ಲ, ಆಕಾಶವಾಣಿ ಕೇಂದ್ರಗಳಿಲ್ಲ, ಗುರುಗಳನ್ನರಸಿ ತಿರುಗಾಡದ ಊರುಗಳಿಲ್ಲ, ಅವರ ಸಂಗೀತ ಜ್ಞಾನದಾಹ ಅಂಥದು.

ಗುರುಗಳನ್ನರಸಿ ರಾಜಗುರು ಲಾಹೋರಿಗೆ ಬಂದರು.ಪಂಚಾಕ್ಷರಿ ಗವಾಯಿಗಳ ಗುರುಗಳೂ ಕಿರಾಣಾ ಘರಾಣೆಯ ಅಧ್ವರ್ಯುಗಳೂ ಆಗಿದ್ದ ಅಬ್ದುಲ್ ವಹೀದಖಾನರು “ಪಂಚಾಕ್ಷರಿ ಕಾ ಶಾಗಿರ್ದ ಹೈ” ಎಂದು ಸಂತಸಪಟ್ಟು ಎರಡೂವರೆ ವರ್ಷ ವಿದ್ಯಾದಾನ ಮಾಡಿದರು. ೧೯೪೪ರಲ್ಲಿ ರಾಜಗುರು ಲತೀಫಖಾನರಲ್ಲಿ ವಿದ್ಯೆ ಸಂಪಾದಿಸಲು ಕರಾಚಿಗೆ ಹೋಗಿ ಆರು ತಿಂಗಳು ಇದ್ದರು. ಭಾರತದಿಂದ ಪಾಕಿಸ್ತಾನ ವಿಭಜನೆಯ ಆಂದೋಲನ. ೧೯೪೭ರಷ್ಟೊತ್ತಿಗೆ ಹಿಂದೂ-ಮುಸ್ಲಿಮ ದ್ವೇಷದ ಕಾಳ್ಗಿಚ್ಚು ಹಬ್ಬಿತು. ಗುರು ಲತೀಫ ಖಾನರು “ಬೇಟಾ, ಅಬ್ ತುಮ್ ಚಲೆ ಜಾವೊ. ಯಂಹಾ ಖೈರಿಯತ್ ನಹೀಂ ಹೈ” ಎಂದು ಕಳಿಸಿಕೊಟ್ಟರು. ರಾಜಗುರು ಕೈಯಲ್ಲಿ ಜೀವ ಹಿಡಿದುಕೊಂಡು ರೈಲುಗಾಡಿಯೇರಿದರು. ನಿಷ್ಕಾರಣ, ನಿಷ್ಕರುಣ ಕೊಲೆಯನ್ನು ಕಣ್ಣಾರೆ ಕಂಡರು. ಭಾರತ-ಪಾಕ್ ನಡುವೆ ಅದೇ ಕೊನೆಯ ರೈಲಾಯಿತು.

ಬಸವರಾಜ ರಾಜಗುರು ತಮ್ಮ ಗಾಯನ ಪೌರುಷ ಮೆರೆದ ಪ್ರಸಂಗಗಳು ಹತ್ತು ಹಲವು. ಅವರಿಗೆ ತಮ್ಮ ಗಾಯನ ಸಾಮರ್ಥ್ಯದ ಬಗೆಗೆ ಅಳುಕಿಲ್ಲದ ಆತ್ಮವಿಶ್ವಾಸ. ಅವರೊಬ್ಬ ಜಿದ್ದಿ ಗಾಯಕ. ಸೋಲುವವರೆ ಅಲ್ಲ. ಹಿಂದೆ ಮುಂದೆ ಹಾಡುವವರಿದ್ದರೆ ಎಲ್ಲಿಲ್ಲದ ಉತ್ಸಾಹ. ಅವರನ್ನು ಮೀರುವಂತೆ ಹಾಡುತ್ತಿದ್ದರು. ೧೯೫೫. ದಿಲ್ಲಿಯ ನಗರಭವನ. ವಿಷ್ಣು ದಿಗಂಬರ ಪಲುಸ್ಕರರ ಪುಣ್ಯತಿಥಿ, ಭಾರತದ ಎಲ್ಲೆಡೆಗಳಿಂದ ಬಂದಿದ್ದ ಉದ್ದಾಮ ಸಂಗೀತಗಾರರ ಸಮಾವೇಶ. ಓಂಕಾರನಾಥ ಠಾಕೂರ ಭರ್ಜರಿ ಹಾಡಿದರು. ಆಮೇಲೆ ಹಾಡಲು ಗಾಯಕರು ನಾ ಒಲ್ಲೆ ನೀ ಒಲ್ಲೆ ಎನ್ನತೊಡಗಿದರು. ವಾದ್ಯ ಸಂಗೀತದ ಸಿದ್ಧತೆರ ನಡೆಯಿತು. ಅಷ್ಟರಲ್ಲಿ ಬಸವರಾಜ ರಾಜಗುರು "ನಾ ಹಾಡುವೆ" ಎಂದರು. ಸಭೆ ಮೂಕವಿಸ್ಮಯ. "ಆಯಿತು, ನಿಮ್ಮ ಸಾಧನೆ ಪ್ರದರ್ಶಿಸಿರಿ" ಎಂದು ಸಂಘಟಕರ ಕೊಂಕುನುಡಿ. ರಾಜಗುರು ನಾಯಕಿ ಕಾನಡಾ ಹಾಡಿ ಶ್ರೋತೃಗಳನ್ನು ಮಂತ್ರಮುಗ್ಧಗೊಳಿಸಿದರು. ಅದೆಂಥ ಎದೆಗಾರಿಕೆ. ಅದವರ ಪ್ರಥಮ ದಿಲ್ಲಿ ಬೈಠಕ್ ಬೇರೆ.

೧೯೫೫, ನಾಂದೇಡ ಸಂಗೀತ ಸಮ್ಮೇಳನ. ರಾಜಗುರು ರಾತ್ರಿ ಹಾಡಬೇಕಿತ್ತು. ಬೆಳಿಗ್ಗೆ ೮ ಗಂಟೆಗೆ ನಾಂದೇಡ ತಲುಪಿದ್ದರು. ಬೆಳಿಗ್ಗೆ ಹಾಡಬೇಕಿದ್ದ ಡಿ.ವಿ. ಪಲುಸ್ಕರ ಬಂದಿರಲಿಲ್ಲ. ಸಂಘಟಕರು ಬೆಳಿಗ್ಗೆಯೆ ಹಾಡುವಂತೆ ರಾಜಗುರು ಅವರನ್ನು ವಿನಂತಿಸಿಕೊಂಡರು. ಮುಖ ತೊಳೆದುಕೊಂಡು ಹಾಲು ಕುಡಿದು ವೇದಿಕೆಯೇರಿದರು. ಗಾಯನ ಮುಗಿಸಲು ಶ್ರೋತೃಗಲು ಬಿಡಲೊಲ್ಲರು. ಸಂಗೀತ ಬಲ್ಲ ಅಂದಿನ ಆಕಾಶವಾಣಿ ಮಂತ್ರಿ ಬಿ.ವಿ. ಕೇಸ್ಕರ ಪುಟ್ಟ ಭಾಷಣ ಮಾಡಿ "ಬಸವರಾಜ ರಾಜಗುರು ಡಿ.ವಿ. ಪಲುಸ್ಕರ ಬಾರದ ನಿರಾಸೆಯನ್ನು ನಿವಾರಿಸಿದರು. ಎಷ್ಟೊತ್ತಿನಲ್ಲಾದರೂ ಹಾಡಿಸಿರಿ. ಅವರ ಗಾಯನ ಎಂದೂ ಹುಸಿ ಹೋಗದು. ಬಸವರಾಜ ರಾಜಗುರು ಹುಕುಮಿ ಎಕ್ಕಾ ಇದ್ದಂತೆ" ಎಂದು ಕೊಂಡಾಡಿದರು.

ಬಸವರಾಜ ರಾಜಗುರು ಅವರದು ಅಪಾರ ವೈವಿಧ್ಯ ಬಹುಶ್ರುತತೆ: ಧ್ರುಪದ, ಧಮಾರ್, ಖ್ಯಾಲ, ಠುಮರಿ, ಗಝಲ್, ವಚನಗಳು, ಕನ್ನಡ ಮತ್ತು ಮರಾಠಿ ರಂಗಗೀತೆಗಳು, ಕನ್ನಡ ಮತ್ತು ಮರಾಠಿ ಭಾವಗೀತೆಗಳು, ದಾಸರ ಪದಗಳು, ಕೀರ್ತನೆಗಳು, ಬಯಲಾಟದ ಹಾಡುಗಳು. ಏನೇ ಹಾಡಿದರೂ ಇಂಚರ ಸಂಚಾರ.

ಬಸವರಾಜ ರಾಜಗುರು ಚೀಜುಗಳ ಭಂಡಾರವೇ ಆಗಿದ್ದರು. ಒಂದೊಂದು ರಾಗದಲ್ಲೂ ४೦-४೫ ಚೀಜುಗಳನ್ನು ಹಾಡಬಲ್ಲವರಾಗಿದ್ದರು. ಅವುಗಳಿಗೆ ಸ್ವರಪ್ರಸ್ತಾರ ಹಾಕಿ ಪ್ರಕಟಿಸಿದ್ದರೆ ಅಮೂಲ್ಯ ಗ್ರಂಥವಾಗಿರುತ್ತಿತ್ತು.

ಬಸವರಾಜ ರಾಜಗುರು ಗಾಯನವೆಂದರೆ ಕಿರಾಣಾ, ಗ್ವಾಲಿಯರ, ಪಟಿಯಾಲಾ ಘರಾಣೆಗಳ ತ್ರಿವೇಣಿ ಸಂಗಮ. ಅದು ಹನ್ನೊಂದು ಗುರುಗಳಲ್ಲಿ ಅಭ್ಯಸಿಸಿದ ಫಲ: ಪಂಚಾಕ್ಷರಿ ಗವಾಯಿಗಳು, ನೀಲಕಿಂಠಬುವಾ ಮಿರಜಕರ, ಸವಾಯಿ ಗಂಧರ್ವ, ಸುರೇಶಬಾಬು ಮಾನೆ, ಬಶೀರಖಾನ, ಮುಬಾರಕ ಆಲಿ, ಅಬ್ದುಲ್ ವಹೀದಖಾನ, ಲತೀಫಖಾನ, ಇನಾಯತುಲ್ಲಾಖಾನ, ರೋಶನ ಅಲಿ, ಗೋವಿಂದರಾವ ಟೇಂಬೆ. ಹೀಗಾಗಿ, ಅವರ ಗಾಯನದಲ್ಲಿ ಎಲ್ಲಿಲ್ಲದ ಸಾರಸಂಗ್ರಹ ಗುಣ. ಇವರೆಲ್ಲರ ಪ್ರಭಾವಗಳನ್ನು ತೇಪೆಯಾಗದಂತೆ ತಮ್ಮ ಪ್ರತಿಭೆಯ ಮೂಸೆಯಲ್ಲಿ ಎರಕ ಹೊಯ್ದುದು ರಾಜಗುರು ಅವರ ದೊಡ್ಡ ಸಾಧನೆ.

ಬಸವರಾಜ ರಾಜಗುರು ಅವರದು ದೈವದತ್ತ ಕಂಠ. ಆ ಎಂದರೆ ಸಾಕು, ಶ್ರೋತೃ ಮಂತ್ರಮುಗ್ಧ.ಧ್ವನಿ ಮೇಣದಂತೆ ಮಿದುವು. ಅತ್ಯಧಿಕ ಸ್ಥಿತಿಸ್ಥಾಪಕತೆ. ಶೃತಿಗೆ ಒಂದಿನಿತೂ ಚ್ಯುತಿಯಾಗದಂತೆ ಮೂರೂ ಸಪ್ತಕಗಳಲ್ಲಿ ಲೀಲಾಜಾಲ ಸಂಚಾರ. ತಾರಸಪ್ತಕದಲ್ಲಂತೂ ವಿಜೃಂಭಣೆ. ಗಝಲ್ ರಾಣಿ ಬೇಗಂ ಅಖ್ತರ್ "ರಾಜಗುರು ಆನೆ ಸೂಖ ಕಾ ಬಾದಶಾಹ" ಎಂದು ಉದ್ಗರಿಸಿದ್ದು ಸುಮ್ಮನೆ ಅಲ್ಲ.

ಒಮ್ಮೊಮ್ಮೆ ಇದ್ದಕ್ಕಿದ್ದಂತೆ ಹಿಂದುಸ್ತಾನಿ ಗಾಯನ ಮಧ್ಯದಲ್ಲಿ ಕರ್ನಾಟಕ ಸ್ವರಪ್ರಸ್ತಾರ ಚಿಮ್ಮಿ ಬರುತ್ತಿದ್ದುದಿದೆ. ಒಮ್ಮ ಅಹಿರಭೈರವ ಹಾಡಿದ ಮೇಲೆ ಸಮಾಂತರ ಕರ್ನಾಟಕ ರಾಗ ಚಕ್ರವಾಕಮ್‌ನಲ್ಲಿ ತ್ಯಾಗರಾಜ ಕೃತಿ ಹಾಡಿದ್ದುದಿದೆ. ಎರಡೂ ಪದ್ಧತಿಗಳಲ್ಲಿ ಪರಿಣತಿ.

ಬಸವರಾಜ ರಾಜಗುರು ಅವರ ತೀವ್ರಗತಿಯ ತಾನಗಳಲ್ಲಿ ಬಡೆ ಗುಲಾಮ ಅಲಿ ಖಾನರ ನಿರಾಯಾಸತೆ, ಸಂಕೀರ್ಣತೆ ಇವೆ. ತೀವ್ರಗತಿಯಲ್ಲೂ ಇಂಚರ ಅಬಾಧಿತ. ಕೆಲವು ಗಾಯಕರ ಧ್ವನಿಯಾದರೂ ತೀವ್ರಗತಿಯಲ್ಲಿ ಕೀರಲಾಗಿಬಿಡುತ್ತದೆ. ಸ್ವರಶುದ್ಧತೆಗೆ ಚ್ಯುತಿಬಾರದ ಸ್ಪಷ್ಟೋಚ್ಚಾರಣೆ ರಾಜಗುರು ಅವರ ಗಾಯನದಲ್ಲಿ. ವೃದ್ಧ ಶ್ರೋತೃಗಳು ರಾಜಗುರು ಗಾಯನ ಆಲಿಸುವಾಗ "ಇದು ದೀನಾನಾಥ ಅಂಥದು, ಇದು ನಾರಾಯಣಬುವಾ ಅವರ ಮುರ್ಕಿ, ಇದು ಕೇಶವರಾವ್‌ರ ಚಕ್ರಿತಾನ, ಇದು ಶಂಕರರಾವ್‌ರ ಸ್ವರ" ಇತ್ಯಾದಿಯಾಗಿ ಗುರುತಿಸುತ್ತಿದ್ದರು. ರಾಜಗುರು ಗಾಯನದಲ್ಲಿ ಘಸೀಟ್, ಮುರ್ಕಿ, ಗಮಕ್, ಮೀಂಡ್, ಸರಗಮ್, ಬೋಲ್‌ತಾನ್ ಏನೆಲ್ಲ ಮಸಾಲೆಗಳು! ಇವೆಲ್ಲಕ್ಕೆ ಉಪ್ಪಿನಕಾಯಿಯಂತೆ ಅದ್ಭುತ ಆಶುಚಮತ್ಕಾರ. ಅದೊಂದು ನಳಪಾಕ!!

ಬಸವರಾಜ ರಾಜಗುರು ಅವರಿಗೆ ಹಲವು ಬಿರುದು, ಪ್ರಶಸ್ತಿಗಳು ಸಂದಿವೆ. ಇದನ್ನು ಸರಕಾರ, ಸಂಗೀತ ಪ್ರೇಮಿಗಳು ಮತ್ತು ಸಂಸ್ಥೆಗಳು ಕೊಡಮಾಡಿವೆ. **ಗಾನಕೋಕಿಲೆ, ಸಂಗೀತ ಸುಧಾಕರ, ಗಾನಗಂಧರ್ವ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ,** ಮುಂಬಯಿಯ ಸೂರಸಿಂಗಾರ್ ಸಂಸದ್‌ನ **ಸ್ವರವಿಲಾಸ,** ಕರ್ನಾಟಕ ವಿಶ್ವವಿದ್ಯಾಲಯದ ಗೌರವ **ಡಾಕ್ಟರೇಟ್, ಪದ್ಮಭೂಷಣ.**

ಆದರೆ, ಇವೆಲ್ಲಕ್ಕೂ ಮಿಗಿಲಾದ ಪ್ರಶಸ್ತಿಯೆಂದರೆ ಬಸವರಾಜ ರಾಜಗುರು ಅವರು ಬಳುವಳಿಯಾಗಿ ಬಿಟ್ಟುಹೋಗಿರುವ ಶಿಷ್ಯವೃಂದ. ಸೋಮನಾಥ ಮರಡೂರ, ಷಣ್ಮುಖ ಗೋಜನೂರ, ಗಣಪತಿ ಭಟ್ಟ ಹಾಸಣಗಿ, ಪರಮೇಶ್ವರ ಹೆಗಡೆ, ಶ್ರೀಪಾದ ಹೆಗಡೆ, ಶಾಂತಾರಾಮ ಹೆಗಡೆ, ಪೂರ್ಣಿಮಾ ಭಟ್ಟ, ಸಂಗೀತಾ ಕಟ್ಟಿ, ರೋಹಿಣಿ ದೇಶಪಾಂಡೆ, ನಚಿಕೇತ ಶರ್ಮಾ ಮುಂತಾದವರು.ಇವರಲ್ಲನೇಕರು ಉತ್ತಮ ಗಾಯಕರಾಗಿದ್ದು ಗುರುಪರಂಪರೆಯನ್ನು ಮುಂದುವರಿಸಿದ್ದಾರೆ. ಇಷ್ಟೊಂದು ದೊಡ್ಡ ಶಿಷ್ಯಪರಿವಾರ ಹೊಂದಿದ್ದ ಸಂಗೀತಗಾರರು ಅಪರೂಪವೆಂದೇ ಹೇಳಬೇಕು.

## ಬಸವರಾಜ ರಾಜಗುರು

ಪಂ. ಬಸವರಾಜ ರಾಜಗುರು ಅವರು ಜನಿಸಿದ್ದು ೧೯೨೦ರ ಆಗಸ್ಟ್ ೨೪ ರಂದು ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕಿನ ಎಲಿವಾಳದಲ್ಲಿ. ಅವರು ಕೆಳದಿ ರಾಜ ಸಂಸ್ಥಾನದ ಗುರುಗಳು. ಅವರದು ಸಂಗೀತ ಪರಂಪರೆಯ ಮನೆತನ. ತಂದೆ ಮಹಾಂತಸ್ವಾಮಿ ಸಂಗೀತಗಾರರು ಪಿಟೀಲು ಚೆನ್ನಾಗಿ ನುಡಿಸುತ್ತಿದ್ದರು. ತಂಜಾವೂರಿಗೆ ಹೋಗಿ ಕರ್ನಾಟಕೀ ಸಂಗೀತ ಕಲಿತು ಬಂದವರು. ಬಾಲಕನಿರುವಾಗಲೇ ಬಸವರಾಜ ಪಂ. ಪಂಚಾಕ್ಷರಿ ಗವಾಯಿಗಳ ಶಿಷ್ಯತ್ವ ವಹಿಸಿದರು. ಪಂ. ಪಂಚಾಕ್ಷರಿ ಗವಾಯಿಗಳು ಬಸವರಾಜರಿಗೆ ತಮ್ಮ ಗರಡಿಯಲ್ಲಿ ೧೨ ವರ್ಷ ಗ್ವಾಲಿಯರ್ ಘರಾಣೆಯ ಶಿಕ್ಷಣ ನೀಡಿದರು.

೧೯೩೬ರಲ್ಲಿ ಹಂಪಿಯಲ್ಲಿ ವಿಜಯನಗರ ಸಾಮ್ರಾಜ್ಯದ ಆರನೇ ಶತಮಾನೋತ್ಸವದಲ್ಲಿ ಹಾಡಿದ್ದು. ಅವರ ಪ್ರಥಮ ಸಾರ್ವಜನಿಕ ಸಂಗೀತ ಕಚೇರಿ. ಆ ಕಚೇರಿ ಮೂಲಕ ದೇಶದೆಲ್ಲೆಡೆ ಹೆಸರು. ೧೯೩೮ರಲ್ಲಿ ಮುಂಬೈಗೆ ಪ್ರಯಾಣ. ಮುಂಬೈ ಆಕಾಶವಾಣಿ ಮೂಲಕ ದೇಶದ ತುಂಬೆಲ್ಲ ಅವರ ಹೆಸರು ವ್ಯಾಪಕವಾಯಿತು. ಹೆಚ್.ಎಂ.ವಿ. ಮೂಲಕ ಅನೇಕ ರಾಗ ಹಾಗೂ ವಚನಗಳ ಧ್ವನಿ ಮುದ್ರಣ. ೧೯೪೧ ರಲ್ಲಿ ಉತ್ತರ-ಭಾರತದತ್ತ ಪ್ರಯಾಣ. ಪಾಕಿಸ್ತಾನದ ಲಾಹೋರಿಗೆ ಹೋಗಿ ಅಬ್ದುಲ್ ವಹೀದ್‌ಖಾನರಲ್ಲಿ ಕಿರಾಣಾ ಘರಾಣಾ, ಕರಾಚಿಗೆ ಹೋಗಿ ಲತೀಫ್‌ಖಾನರಿಂದ ಪಟಿಯಾಲಾ ಘರಾಣ ತಾಲೀಮು ಪಡೆದವರು. ಮುಂಬೈಯಲ್ಲಿ ಸವಾಯ್ ಗಂಧರ್ವ, ಪುಣೆಯಲ್ಲಿ ಸುರೇಶ ಬಾಬುಮಾನೆ, ಅವರಿಂದ ತಾಲೀಮು. ನೀಲಕಂಠ ಬುವಾ ಮೀಜಕರ, ಮುಬಾರಕಲಿ, ಇನಾಯತುಲ್ಲಾಖಾನ್, ರೋಶನ್‌ಅಲಿ,

ಲಗೋವಿಂದರಾವ ಟೇಂಬೆ - ಹೀಗೆ ಹನ್ನೊಂದು ಗುರುಗಳ ಗರಡಿಯಲ್ಲಿ ಪಳಗಿದ ಗಾಯಕರೆನಿಸಿದ ಅವರ ಹಾಡುಗಾರಿಕೆ ಗ್ವಾಲಿಯರ್, ಕಿರಾಣಾ ಹಾಗೂ ಪಟಿಯಾಲಾ ಈ ಮೂರು ಘರಾಣೆಗಳ ತ್ರಿವೇಣಿ ಸಂಗಮ.

ಪಂ. ಬಸವರಾಜ ರಾಜಗುರು ಅವರ ಕಂಠ ಕೋಗಿಲೆಯಷ್ಟು ಇಂಪು. ಮೂರು ಸಪ್ತಕಗಳಲ್ಲಿ ಲೀಲಾಜಾಲವಾಗಿ ಅದರ ವಿಸ್ತಾರ. ಧ್ರುಪದ್, ಧಮಾರ, ಖಯಾಲ್, ಟಪ್ಪಾ ,ಠುಮ್ರಿ, ಗಜಲ್, ಚತುರಂಗ, ತರಾನಾ, ನಾಟ್ಯಗೀತ, ವಚನ ದಾಸರಪದ- ಹೀಗೆ ಅವರ ಕಂಠದಲ್ಲಿ ಓತಪ್ರೋತ. ಅವರ ಹತ್ತಿರ ೧೨ ಸಾವಿರ ಬಂದೀಶಗಳ ಸಂಗ್ರಹವಿತ್ತು. ಒಂದೊಂದು ರಾಗದಲ್ಲಿ ೪೦-೫೦ ಬಂದೀಶಗಳು. ಅಂತೆಯೇ ಅವರು 'ಚೀಜ್‌ಗಳ ಖಜಾನೆ', 'ಸಾವಿರ ಚೀಜ್‌ಗಳ ಸರ್ದಾರ' ಆಗಿದ್ದರು. ಕೇಂದ್ರ ಹಿಂದಿನ ಆಕಾಶವಾಣಿ ಮಂತ್ರಿ ಬಿ.ವಿ. ಕೇಸ್ಕರ 'ಹುಕುಮಿ ಎಕ್ಕಾ' ಹುಸಿಯೆಂಬುದಿಲ್ಲವೆಂದು, 'ಗಜಲ್‌ರಾಣಿ' ರಾಜಗುರುಯಾನೆ ಸೂರ್ ಕಾ ಬಾದಶಹಾ, ಎಂದು ಉದ್ಗರಿಸಿದ್ದು ಜನಜನಿತವಾದ ಮಾತು. ರಾಜಗುರುಗಳ ಕಂಠಕ್ಕೆ ಸ್ವತಃ ಪಂ. ಪಂಚಾಕ್ಷರಿ ಗವಾಯಿಗಳು 'ಸ್ವರಾಜ' ಎಂದು ಹೇಳಿದ್ದುಂಟು.

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಸಂಗೀತ ವಿಭಾಗದಲ್ಲಿ ಅವರು ಕೆಲವು ವರ್ಷ ಗೌರವ ಸಂಗೀತ ಪ್ರಾಧ್ಯಾಪಕರಾಗಿ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಸದಸ್ಯರಾಗಿ (೧೯೮೭-೧೯೯೦) ಕಾರ್ಯ ನಿರ್ವಹಿಸಿದ್ದಾರೆ. ಅವರು ಹಾಡದ ಸಂಗೀತ ಸಮ್ಮೇಳನಗಳಿಲ್ಲ; ಆಕಾಶವಾಣಿ ಕೇಂದ್ರಗಳಿಲ್ಲ. ಹಾಡದ ಊರಿಲ್ಲ. ಅವರ ಹಾಗೆ ಧ್ವನಿ ಕಾಯ್ದುಕೊಂಡು ಬಂಧವರು ವಿರಳ. ಅವರಿಗೆ ದೊರೆತ ಪ್ರಶಸ್ತಿ-ಪುರಸ್ಕಾರಗಳಿಗೆ ಲೆಕ್ಕವಿಲ್ಲ. ಅಂಥವುಗಳಲ್ಲಿ 'ಸಂಗೀತ ರತ್ನ' (೧೯೪೭), ಹೈದ್ರಾಬಾದ ಕರ್ನಾಟಕ ವೀರಶೈವ ಮಹಾ ಸಭೆಯ 'ಸಂಗೀತ ಸುರ್ದಾರ' (೧೯೫೬), ಗಾನ ಗಂಧರ್ವ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಪ್ರಶಸ್ತಿ (೧೯೭೧), ಕೇಂದ್ರ ಸರ್ಕಾರದ 'ಪದ್ಮಶ್ರೀ' (೧೯೭೫), 'ಪದ್ಮಭೂಷಣ' (೧೯೯೧), 'ಅಭಿನವ ಗಂಧರ್ವ' (೧೯೮೧), 'ಕೇಂದ್ರ ಸಂಗೀತ ನಾಟಕ ಅಕಾಡೆಮಿ' ಪ್ರಶಸ್ತಿ (೧೯೮೨), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (೧೯೮೩), ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ (೧೯೯೦), 'ಗಾನಕೋಗಿಲೆ', ಮುಂಬೈಸೂರ ಸಿಂಗಾರ ಸಂಸದ್‌ನ 'ಸ್ವರವಿಲಾಸ', 'ಸಂಗೀತ ಶಿರೋಮಣಿ' (೧೯೭೧), 'ಅಭಿನವ ಗಂಧರ್ವ' (೧೯೮೧) - ಮುಂತಾದವು ಉಲ್ಲೇಖನೀಯ.

೧೯೯೧ರ ಜುಲೈ ೨೧ ರಂದು ಬೆಂಗಳೂರಿನಲ್ಲಿ ಹೃದಯಾಘಾತದಿಂದ ಲಿಂಗೈಕ್ಯರಾದ ಪಂ.ಬಸವರಾಜ ರಾಜ ಗುರು ಅವರ ಶಿಷ್ಯ ಸಂಪತ್ತು ಅಪ್ಪ. ಅಂಥವರಲ್ಲಿ ಶ್ರೀ ಹಾಲಯ್ಯ, ಸ್ವಾಮಿ ಸಂಗಮೇಶ ಹಿರೇಮಠ, ಸೋಮನಾಥ ಮರಡೂರ, ಗಣಪತಿ ಭಟ್, ಷಣ್ಮುಖ ಗೊಜನೂರ, ಸೋಮಶೇಖರ ಮರಡೀಮಠ, ಪರಮೇಶ್ವರ ಹೆಗಡೆ, ಶ್ರೀಪಾದ ಹೆಗಡೆ, ಡಾ. ಶಾಂತಾರಾಮ ಹೆಗಡೆ, ಪ್ರೊ. ಸಿದ್ಧರಾಮಯ್ಯ ಮಠಪತಿ ಗೋರಟಾ, ಪ್ರೊ. ಮಹೇಶಕುಮಾರ ಚಿಂಚಖಂಡಿಮಠ, ಡಾ. ಹನುವಣ್ಣ ನಾಯಕ ದೊರೆ, ಪೂರ್ಣಿಮಾ ಭಟ್, ರೋಹಿಣಿ ದೇಶಪಾಂಡೆ, ಸಂಗೀತಾ ಕಟ್ಟಿಮುದ್ದು ಮೋಹನ, ಶಿವಾನಂದ ಪಾಟೀಲ, ನಚಿಕೇತ ಶರ್ಮಾ, ದತ್ತಾಕೋಶಿ- ಮುಂತಾದವರು ಉಲ್ಲೇಖನೀಯರಾಗಿದ್ದಾರೆ. 'ಇಂಚರ', 'ಸಂಗೀತ ರತ್ನ'ಅವರಿಗೆ ಅರ್ಪಿಸಿದ ಅಭಿನಂದನ ಗ್ರಂಥಗಳು.